# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಮಂಗಳವಾರ, ಜೂನ್ 04, 2024

ಸಂಪುಟ : 51 ಸಂಚಿಕೆ : 21 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



THE TEAM ACADEMY

LONG TERM NEET 2025 — BATCH STARTS ON 6TH JUNE 2024

Introducing JEE-LONG TERM — BATCH STARTS ON 6TH JUNE 2024

NEET 2024 Expected Scores

100+ Medical Seats Expected

600 Above 38 Students | 500 Above 100 Students

661 Akash B B | 680 Tejas T | 690 Pakkiresh T | 665 Harsha Vardhan | 653 Mahesh N P

Davangere : 9035109411, 9900565795, 9538546758 Shivamogga : 9902303441, 9963505593, 9591319279


## ಮಾಜಿ ಸಚಿವ ಎಂಪಿಆರ್ ಕುಟುಂಬಕ್ಕೆ ಕೊಲೆ ಬೆದರಿಕೆ ಕರೆ



ಹೊನ್ನಾಳಿ, ಜೂ.2- ಇಂದು ಮಧ್ಯಾಹ್ನ ನನ್ನ ಹಾಗೂ ನನ್ನ ಕುಟುಂಬವನ್ನು ಕೊಲೆ ಮಾಡುವುದಾಗಿ ಫೋನ್ ಕರೆ ಮೂಲಕ ಬೆದರಿಕೆ ಹಾಕಿರುವುದಾಗಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಇಂದು ಸಂಜೆ ದೂರು ದಾಖಲಿಸಿದ್ದಾರೆ.

ದೂರವಾಣಿಯಲ್ಲಿ 'ನಿನ್ನನ್ನು ಮತ್ತು ನಿನ್ನ ಮಗನನ್ನು ಇಂದು ರಾತ್ರಿ (2ನೇ ಪುಟಕ್ಕೆ)

## 64.2 ಕೋಟಿ ಜನರಿಂದ ಮತದಾನ ವಿಶ್ವ ದಾಖಲೆ

ನವದೆಹಲಿ, ಜೂ. 3 – ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 64.2 ಕೋಟಿ ಮತದಾರರು ಮತ ಚಲಾಯಿಸಿದ್ದು ವಿಶ್ವ ದಾಖಲೆಯಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ (2ನೇ ಪುಟಕ್ಕೆ)

# ಐದು ವರ್ಷಗಳ ಚುಕ್ಕಾಣಿ ಯಾರ ಹೆಗಲಿಗೆ ?

**ಲೋಕಸಭಾ ಚುನಾವಣಾ ಫಲಿತಾಂಶ ಇಂದು ನಿರ್ಧಾರ**

ನವದೆಹಲಿ, ಜೂ. 3 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೂರನೇ ಬಾರಿ ಅಧಿಕಾರಕ್ಕೆ ಬರಲಿದ್ದಾರೆಯೇ ಅಥವಾ ಹತ್ತು ವರ್ಷಗಳ ನಂತರ ವಿಪಕ್ಷಗಳು ಮತ್ತೆ ಸರ್ಕಾರ ರಚಿಸಲು ಸಾಧ್ಯವಾಗಲಿದೆಯೇ ಎಂಬುದು ಮಂಗಳವಾರ ನಿರ್ಧಾರವಾಗಲಿದೆ. 80 ದಿನಗಳ ಕಾಲ ನಡೆದ ಸುದೀರ್ಘ ಮತದಾನ ಪ್ರಕ್ರಿಯೆ ನಂತರ ಮತ ಎಣಿಕೆಗೆ ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿದೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಮತದಾನೋತ್ತರ ಸಮೀಕ್ಷೆಗಳು ತಿಳಿಸಿವೆ. ಆದರೆ 295ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸ ಇದೆ ಎಂದು ಐ.ಎನ್.ಡಿ.ಐ.ಎ. ಮೈತ್ರಿಕೂಟದ ನಾಯಕರು ಹೇಳಿದ್ದಾರೆ.

ಚುನಾವಣಾ ಸಮಯದಲ್ಲಿ ಏನೇ ಚಕಮಕಿಗಳು ನಡೆದರೂ ಸಹ, ಚುನಾವಣಾ ಫಲಿತಾಂಶವನ್ನು ಒಪ್ಪುವುದು ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಆದರೆ, ಈ ಬಾರಿ ಚುನಾವಣಾ ಆಯೋಗದ ಕಾರ್ಯವೈಖರಿ ಬಗ್ಗೆ ಪ್ರತಿಪಕ್ಷಗಳು ನಿರಂತರವಾಗಿ ಪ್ರಶ್ನಿಸುತ್ತಾ ಬಂದಿವೆ.

ಮತ ಎಣಿಕೆಯ ಕ್ಷಣಗಳು ಹತ್ತಿರ ಬಂದರೂ ಆಡಳಿತಾರೂಢ ಹಾಗೂ ವಿರೋಧ ಪಕ್ಷಗಳ ನಡುವಿನ ಆರೋಪ – ಪ್ರತ್ಯಾರೋಪಗಳು ನಿಂತಿಲ್ಲ. ಚುನಾವಣಾ ಪ್ರಕ್ರಿಯೆ ಮೇಲೆ ಪ್ರಭಾವ ಬೀರುವ ಯತ್ನ ನಡೆದಿದೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಆರೋಪಿಸಿದ್ದರೆ, ಈ ಬಗ್ಗೆ (4ನೇ ಪುಟಕ್ಕೆ)



ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರು ಸೋಮವಾರ ದಾವಣಗೆರೆ ವಿವಿಯ ಮತ ಎಣಿಕೆ ಕೊಠಡಿಗಳಲ್ಲಿ ಕೈಗೊಂಡ ಸಿದ್ಧತೆಗಳನ್ನು ಪರಿಶೀಲಿಸಿದರು.

## ದಾವಿವಿಯಲ್ಲಿ ಬೆಳಿಗ್ಗೆ 8ರಿಂದ ಮತ ಎಣಿಕೆ

ದಾವಣಗೆರೆ, ಜೂ.3- ದಾವಣಗೆರೆ ಲೋಕಸಭಾ ಕ್ಷೇತ್ರದ ಮತ ಎಣಿಕೆಯು ತೋಳಹುಣಸೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿನ ಶಿವಗಂಗೋತ್ರಿಯಲ್ಲಿ ಇಂದು ಬೆಳಗ್ಗೆ 8 ಗಂಟೆಯಿಂದ ನಡೆಯಲಿದ್ದು, ಸಿದ್ದತೆಗಳು ಪೂರ್ಣಗೊಂಡಿವೆ ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಮಂಗಳವಾರ ಎಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಎಣಿಕೆ ಕೊಠಡಿಗಳಲ್ಲಿ ಕೈಗೊಂಡ ಸಿದ್ಧತೆಗಳನ್ನು ಪರಿಶೀಲಿಸಿ ಮಾತನಾಡಿದರು. ದಾವಣಗೆರೆ ಲೋಕಸಭಾ ಕ್ಷೇತ್ರವು 8 (2ನೇ ಪುಟಕ್ಕೆ)


4ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪಾರ್ವತಿಬಾಯಿ ಕುರ್ಡೇಕರ್ (ಉತ್ತಂಗಿ)

ನಿಧನ : 19.05.2020

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ...
ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ...

ಪುತ್ರರು, ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಕುರ್ಡೇಕರ್, ಉತ್ತಂಗಿ ವಂಶಸ್ಥರು

ಉತ್ತಂಗಿ ಜ್ಯೂಯಲರ್ಸ್ ದಾವಣಗೆರೆ


## ಆಗ್ನೇಯ ಶಿಕ್ಷಕರ ಕ್ಷೇತ್ರ ಶೇ.92.93 ಮತದಾನ

**ಜೂ.6 ರಂದು ಬೆಂಗಳೂರು, ಮೈಸೂರಿನಲ್ಲಿ ಮತ ಎಣಿಕೆ**

ದಾವಣಗೆರೆ, ಜೂ.3- ಆಗ್ನೇಯ ಶಿಕ್ಷಕರ ಕ್ಷೇತ್ರ ಮತ್ತು ನೈರುತ್ಯ ಶಿಕ್ಷಕರ, ಪದವೀಧರರ ಕ್ಷೇತ್ರಗಳಿಗೆ ಸೋಮವಾರ ಮತದಾನ ಶಾಂತಯುತವಾಗಿ ನಡೆದಿದೆ.

ಜಿಲ್ಲೆಯಲ್ಲಿ ನಡೆದ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಶೇ.92.93ರಷ್ಟು ಮತದಾನವಾಗಿದೆ. ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಶೇ.87.74 ಹಾಗೂ ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಶೇ.80.95 ರಷ್ಟು ಮತದಾನವಾಗಿದೆ.

ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಿತಾದರೂ, ಬೆಳಿಗ್ಗೆಯೇ ಚುರುಕು ಪಡೆದಿತ್ತು. ಶಿಕ್ಷಕರು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.

ಕೆಲವು ಖಾಸಗಿ ಶಾಲೆಗಳಿಗೆ ಚುನಾವಣೆ ಅಂಗವಾಗಿ ರಜೆ ಘೋಷಿಸಲಾಗಿತ್ತು. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಶಿಕ್ಷಕರು ಮತದಾನ ಮಾಡಿ ಲಗುಬಗೆಯಿಂದ ಕರ್ತವ್ಯಕ್ಕೆ ದೌಡಾಯಿಸುತ್ತಿದ್ದರು.

ನಗರದ ಹೈಸ್ಕೂಲ್ ಮೈದಾನ ಸೇರಿದಂತೆ, ಮತ ಕೇಂದ್ರಗಳ ಬಳಿ ರಾಜಕೀಯ ಪಕ್ಷದ ಮುಖಂಡರು ತಮ್ಮ ಪರವಾದ ಅಭ್ಯರ್ಥಿಗಳಿಗೆ ಮತ ಚಲಾಯಿಸುವಂತೆ ಮನವಿ ಮಾಡುತ್ತಿದ್ದರು.

ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಜಿಲ್ಲೆಯ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳಲ್ಲಿ ಒಟ್ಟು 7 ಮತಗಟ್ಟೆಗಳಿದ್ದು 4351 ಮತದಾರರಿದ್ದರು. ಈ ಪೈಕಿ 2608 ಪುರುಷ ಹಾಗೂ 1446 ಮಹಿಳೆಯರು ಸೇರಿ ಒಟ್ಟು 4051 ಮತದಾರರು ಮತ ಚಲಾಯಿಸಿದ್ದಾರೆ. ಇಲ್ಲಿ ಹಕ್ಕು ಚಲಾಯಿಸಿದವರ (4ನೇ ಪುಟಕ್ಕೆ)

## ಪದವೀಧರರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಪರ ಹಣ ಹಂಚಿಕೆ : ಬಂಧನ

ಹೊನ್ನಾಳಿ, ಜೂ.3- ನೈರುತ್ಯ ಪದವೀಧರರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಎಸ್.ಪಿ. ದಿನೇಶ್ ಪರವಾಗಿ ಪದವೀಧರ ಮತದಾರರಿಗೆ ಹಣದ ಆಮಿಷವೊಡ್ಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸೋಮವಾರ ನೈರುತ್ಯ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರದ ಮತದಾನದ ಪ್ರಕ್ರಿಯೆ ನಡೆಯುತ್ತಿದ್ದು, ತಾಲ್ಲೂಕು ಕಚೇರಿಯ ಪದವೀಧರರ ಮತದಾನ ಕೇಂದ್ರದಲ್ಲಿ ದಿನೇಶ್ ಪರ ಹಣದ ಆಮಿಷವೊಡ್ಡಿ ಮತ ಹಾಕಿಸಲು ಯತ್ನಿಸುತ್ತಿದ್ದ ಬಸವನಹಳ್ಳಿ ಗ್ರಾಮದ ಬೀರೇಶ ಮತ್ತು ಶಿಕಾರಿಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದ ನ್ಯಾಮತಿ ತಾಲ್ಲೂಕು ಮಾದಾಪುರ ಗ್ರಾಮದ ಎಂ.ಜಿ.ಶಶಿಕಲಾ ಅವರನ್ನು ಉಪವಿಭಾಗಾಧಿಕಾರಿ ವಿ.ಅಭಿಷೇಕ್ ಅವರ ದೂರಿನ (2ನೇ ಪುಟಕ್ಕೆ)

## ಆಸ್ಪತ್ರೆಯಿಂದ ಗುಣವಾಗಿ ಹಿಂದಿರುಗಿದ ಎಸ್ಸೆಸ್



ದಾವಣಗೆರೆ, ಜೂ.3- ಆಯಾಸದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಇಂದು ನಗರಕ್ಕೆ ಆಗಮಿಸಿದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು, ಎಂದಿನಂತೆ ಚೌಕಿಪೇಟೆಯಲ್ಲಿರುವ ಶ್ರೀ ಕಲ್ಲೇಶ್ವರ ಟ್ರೇಡರ್ಸ್ ಅಂಗಡಿಯಲ್ಲಿ ಧಾನ್ಯಗಳ ಪರಿಶೀಲನೆ ಹಾಗೂ ವ್ಯಾಪಾರಿಗಳನ್ನು ಭೇಟಿ ಮಾಡಿ, ಅವರ ಸಮಸ್ಯೆಗಳನ್ನು ಆಲಿಸಿದರು.

ಎಸ್ಸೆಸ್ ಅವರ ಜೊತೆ ಜವಳಿ ಉದ್ಯಮಿ ಬಿ.ಸಿ.ಉಮಾಪತಿ ಸೇರಿದಂತೆ ಮತ್ತಿತರರಿದ್ದರು.


ಲಿವರ್ ಟ್ರಾನ್ಸ್‌ಪ್ಲಾಂಟ್ ಕ್ಲಿನಿಕ್

ಡಾ. ಸುನಿಲ್ ಶೆಣ್ವಿ

ಎಂ.ಎಸ್ (ಜನರಲ್ ಸರ್ಜರಿ) ಎಂ.ಸಿ.ಹೆಚ್ (ಜಿ.ಐ ಮತ್ತು ಎಚ್.ಪಿ.ಬಿ ಸರ್ಜರಿ) (ಎಕ್ಸ್) ಕ್ಲಿನಿಕಲ್ ಅಸಿಸ್ಟೆಂಟ್ ಪ್ರೊಫೆಸರ್, ಮೆಡಿಕಲ್ ಯೂನಿವರ್ಸಿಟಿ ಆಫ್ ಸೌತ್ ಕೆರೊಲಿನಾ, ಯು.ಎಸ್.ಎ ಬಹು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ–ತಜ್ಞರು

ಯಾರು ಪಾಲ್ಗೊಳ್ಳಬೇಕು?

• ಕಾಮಾಲೆ • ಕಿಬ್ಬೊಟ್ಟೆಯ ಹಿಗ್ಗುವಿಕೆ • ಸಾಮಾನ್ಯ ತುರಿಕೆ • ಹೆಪಟೈಟಿಸ್ ಬಿ ಮತ್ತು ಸಿ • ಮದ್ಯಪಾನ ವ್ಯಸನ ಕಾಯಿಲೆ • ಲಿವರ್ ಕ್ಯಾನ್ಸರ್ • ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ • ಮತ್ತು ಪ್ಯಾಂಕ್ರಿಯಾಟೈಟಿಸ್

6ನೇ ಜೂನ್ 2024 – ಗುರುವಾರ

ಅಪಾಯಿಂಟ್‌ಮೆಂಟ್‌ಗಾಗಿ : 76767 97676

ಮಧ್ಯಾಹ್ನ 12 ರಿಂದ 1 ರವರೆಗೆ
ಸಿಟಿ ಸೆಂಟ್ರಲ್ ಆಸ್ಪತ್ರೆ
#17, ಎ ವಿ ಕೆ ಕಾಲೇಜು ರಸ್ತೆ,
ಪಿ ಜೆ ವಿಸ್ತರಣೆ, ದಾವಣಗೆರೆ–577004


ಮಧ್ಯಾಹ್ನ 2 ರಿಂದ 3 ರವರೆಗೆ
ಯುನಿಟಿ ಹೆಲ್ತ್ ಸೆಂಟರ್
5ನೇ ಮುಖ್ಯ, ಜೈನ್ ಶಾಲೆ ಎದುರು,
P J ವಿಸ್ತರಣೆ, ದಾವಣಗೆರೆ–577002

TRUSTWELL HOSPITALS

ನಂ. 5, ಜೆ ಸಿ ರಸ್ತೆ, ಸುಧಾಮ ನಗರ, ಬೆಂಗಳೂರು, ಕರ್ನಾಟಕ 560002



ಕೈಲಾಸ ಸಮಾರಾಧನೆ ಆಹ್ವಾನ



#5562/33,4ನೇ ಮೇನ್,1ನೇ ಅಡ್ಡ ರಸ್ತೆ,ಎಸ್‌ಎಸ್ ಲೇ ಔಟ್ ಬಿ ಬ್ಲಾಕ್, ದಾವಣಗೆರೆ
ಶ್ರೀಮತಿ ಲಲಿತ
ಶ್ರೀ ಮುರುಗೇಂದ್ರಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿ. : 31.05.2024ನೇ ಗುರುವಾರ ಬೆಳಗಿನ ಜಾವ 2.30ಕ್ಕೆ ನಮ್ಮ ದ್ವಿತೀಯ ಪುತ್ರ

ಶ್ರೀ ಎಂ. ಸಿದ್ದೇಶ್‌ಕುಮಾರ್

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಸಮಾರಾಧನೆಯನ್ನು

ದಿನಾಂಕ : 04.06,2024ನೇ ಮಂಗಳವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆಯ ಎಸ್.ಎಸ್. ಲೇ ಔಟ್‌ನಲ್ಲಿರುವ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಕೋರುವ

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ದೀಪಾ ಶ್ರೀಮತಿ ಮಂಜುಳ ಶ್ರೀ ಪ್ರಶಾಂತ, ಶ್ರೀಮತಿ ವಿನುತ ಶ್ರೀ ಪ್ರದೀಪ, ಕುಟುಂಬದವರು, ಬಂಧು-ಮಿತ್ರರು. 98441 55347



ಕೆ.ಬೇವಿನಹಳ್ಳಿ ಗ್ರಾಮದ ಎ.ಎಚ್. ಕೊಟ್ರಪ್ಪ ನಿಧನ



ಹರಿಹರ ತಾಲ್ಲೂಕು ಕೆ.ಬೇವಿನಹಳ್ಳಿ ಗ್ರಾಮದ ದಿ. ಅಂಗಡಿ ಹಾಲಪ್ಪನವರ ಪುತ್ರ

ಎ.ಎಚ್. ಕೊಟ್ರಪ್ಪ

(80 ವರ್ಷ)

ಇವರು ದಿನಾಂಕ 03.06.2024ರ ಸೋಮವಾರ ಮಧ್ಯಾಹ್ನ 3.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.6.2024ರ ಮಂಗಳವಾರ ಬೆಳಿಗ್ಗೆ 12.30ಕ್ಕೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕೆ.ಬೇವಿನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :

ಧರ್ಮಪತ್ನಿ ಶ್ರೀಮತಿ ಅಂಗಡಿ ರತ್ನಮ್ಮ
ಮಕ್ಕಳಾದ ಎ.ಮಹೇಶ್ವರಪ್ಪ, ಪತ್ನಿ : ಶಶಿಕಲಾ
ಎ. ಶಿವರಾಜ್ ಪತ್ನಿ : ರಾಜಮ್ಮ, ಮಗಳಾದ : ವಿಜಯಲಕ್ಷ್ಮಿ
ಅಳಿಯ : ಕರಿಬಸಪ್ಪ ಡಿ. ಹಾಗೂ ಮೊಮ್ಮಕ್ಕಳು, ಅಂಗಡಿ ಸಹೋದರರು. ಕೆ.ಬೇವಿನಹಳ್ಳಿ ಹಾಗೂ ಬಂಧು-ಮಿತ್ರರು.



SIR MV

CELEBRATING 15 years of excellence

NEET-2024 As per NTA Key Answer

SRUSHTI K M 706/720 | DUSHYANTH 705 | AMSHIK G.A. 705 | KOTRESH S. B. 700 | AKASH C. P. 700 | K. PRAJWAL 700 | NAWAZ K. 700

And Many More...

350+ Free Medical Seats Expected Through NEET-2024

SIR MV NEET LONGTERM COACHING-2025

| NAME | Expected NEET-2024 | NEET -2023 Marks | Improvement Marks |
|---|---|---|---|
| RAHUL B. N. | 655 | 287 | 368 |
| CHINMAY N. | 650 | 323 | 327 |
| ADARSH P. B. | 690 | 364 | 326 |
| YASHVANTH H. S. | 655 | 415 | 250 |
| BABUPATEL M. B. | 685 | 479 | 206 |
| NAVEENDEEP G. N. | 690 | 487 | 203 |
| BHUVAN PATIL | 660 | 458 | 202 |
| V. VISHNU | 665 | 471 | 194 |
| TANVI AAZMI V | 653 | 464 | 189 |
| KOUSTHUB A. | 670 | 491 | 179 |
| SAFA H. R. | 650 | 485 | 165 |

| NEET Marks | Concession |
|---|---|
| 450 Above | 77% |
| 400 Above | 63% |
| 350 Above | 33% |

Concession For Above Marks Scored in NEET - 2024

Limited seats & Limited Hostel Facility

SIR M V GROUP OF INSTITUTIONS

DAVANGERE 9243312223 8861044569 8722141400 | SHIMOGA 9035141142 9606554836 9606558762 | BALLARI 8197764018 9945377965

# ರಾಜ್ಯದ 474 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧಾರ

**ಲೋಕಸಭೆ: ಇಂದು ಫಲಿತಾಂಶ**

ಬೆಂಗಳೂರು, ಜೂ. 3 - ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ರಾಜವಂಶಸ್ಥ ಯದುವೀರ ಒಡೆಯರ್ ಸೇರಿದಂತೆ, 474 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಾಳೆ ಮಂಗಳವಾರ ತೀರ್ಮಾನವಾಗಲಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ನಡೆದ ಮತದಾನದ ಎಣಿಕೆ ಕಾರ್ಯ ನಾಳೆ ಬೆಳಗ್ಗೆ 8 ಗಂಟೆಗೆ ಆರಂಭಗೊಂಡು ಮಧ್ಯಾಹ್ನದ ವೇಳೆಗೆ ಫಲಿತಾಂಶ ಹೊರಬೀಳಲಿದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ಲೋಕಸಭಾ ಕ್ಷೇತ್ರಗಳ ಮತ ಎಣಿಕೆ ನಡೆದರೆ, ಉಳಿದಂತೆ ಆಯಾ ಕ್ಷೇತ್ರಗಳ ಜಿಲ್ಲಾ ಕೇಂದ್ರಗಳಲ್ಲಿ ಎಣಿಕೆ ಕಾರ್ಯ ಏಕಕಾಲಕ್ಕೆ ಆರಂಭಗೊಳ್ಳಲಿದೆ.

ಸಂಬಂಧಪಟ್ಟ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಗಳ ಮೇಲುಸ್ತುವಾರಿ ಯಲ್ಲಿ ಮತ ಎಣಿಕೆ ನಡೆಯಲಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲು ಪೊಲೀಸ್ ಬಂದೋಬಸ್ತ್ ಅನ್ನು ಈಗಾಗಲೇ ಮಾಡಲಾಗಿದೆ.

ಮತ ಎಣಿಕೆ ಹಿನ್ನೆಲೆಯಲ್ಲಿ ನಾಳೆ ಮುಂಜಾನೆ 6 ಗಂಟೆಯಿಂದ ಮಧ್ಯರಾತ್ರಿವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಮತ ಎಣಿಕೆ ಕೇಂದ್ರದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೇಂದ್ರ ಚುನಾವಣಾ ಆಯೋಗ ನೇಮಿಸಿರುವ ವೀಕ್ಷಕರು ಪ್ರತಿ ಕೇಂದ್ರದಲ್ಲೂ ಮೇಲ್ವಿಚಾರಣೆ ನಡೆಸಲಿದ್ದಾರೆ.

ರಾಜ್ಯದ 28 ಕ್ಷೇತ್ರಗಳಲ್ಲೂ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ, ಎನ್‌ಡಿಎ ಮೈತ್ರಿಕೂಟದಿಂದ ಬಿಜೆಪಿ 25 ಹಾಗೂ ಜೆಡಿಎಸ್ ಮೂರು ಕ್ಷೇತ್ರಗಳಲ್ಲಿ ತನ್ನ ಉಮೇದುವಾರರನ್ನು ನಿಲ್ಲಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರು-ಕೊಡಗು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತವರು ಜಿಲ್ಲೆ ಗುಲ್ಬರ್ಗ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಕಣಕ್ಕಿಳಿದಿರುವ ಮಂಡ್ಯ ಲೋಕಸಭಾ ಕ್ಷೇತ್ರಗಳ ಫಲಿತಾಂಶ ಕುತೂಹಲ ಮೂಡಿಸಿವೆ.

ಈ ನಾಲ್ಕರಲ್ಲಿ ಮೂರು ಕ್ಷೇತ್ರಗಳು ಕಾಂಗ್ರೆಸ್ ಮುಖಂಡರಿಗೆ ಪ್ರತಿಷ್ಠೆಯಾಗಿವೆ. ಇನ್ನು ಕುಮಾರಸ್ವಾಮಿಗೆ ರಾಜಕೀಯ ಭವಿಷ್ಯ ನಿರ್ಧಾರದ ಕ್ಷಣವಾಗಲಿದೆ.

ಪ್ರಸಕ್ತ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಬೇಕೆಂದು ಕಾಂಗ್ರೆಸ್ 28ರ ಪೈಕಿ 20ರಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ಮಾಡಿಕೊಟ್ಟಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಅಳಿಯ ರಾಧಾಕೃಷ್ಣ ಅವರನ್ನು ಗುಲ್ಬರ್ಗದಿಂದ, ಉಪಮುಖ್ಯಮಂತ್ರಿ ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಬೆಂಗಳೂರು ಗ್ರಾಮಾಂತರದಿಂದ, ಸಚಿವರಾದ ಮಹದೇವಪ್ಪ, ಎಸ್.ಎಸ್.ಮಲ್ಲಿಕಾರ್ಜುನ್, ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಈಶ್ವರ ಖಂಡ್ರೆ, ರಾಮಲಿಂಗಾ ರೆಡ್ಡಿ ಹಾಗೂ ಶಿವಾನಂದ ಪಾಟೀಲ್ ಮಕ್ಕಳು ಇಲ್ಲವೇ ಪತ್ನಿಯರನ್ನು ಇದೇ ಮೊದಲ ಬಾರಿಗೆ ಕಣಕ್ಕಿಳಿಸಿದ್ದಾರೆ.

ಇನ್ನು ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಮ್ಮ ಪುತ್ರ ಬಿ.ವೈ. ರಾಘವೇಂದ್ರ ಶಿವಮೊಗ್ಗದಿಂದಲೂ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ ಧಾರವಾಡ, ಭಗವಂತ ಖೂಬಾ ಬೀದರ್, ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಬೆಳಗಾವಿ, ಬಸವರಾಜ ಬೊಮ್ಮಾಯಿ ಹಾವೇರಿಯಿಂದ ಕಣದಲ್ಲಿದ್ದಾರೆ.

ಹೃದಯ ತಜ್ಞ ಡಾ.ಮಂಜುನಾಥ್ ಬೆಂಗಳೂರು ಗ್ರಾಮಾಂತರ, ಮಾಜಿ ಉಪಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ ಚಿತ್ರದುರ್ಗ, ಬಿ.ಶ್ರೀರಾಮುಲು ಬಳ್ಳಾರಿಯಿಂದ ಚುನಾವಣಾ ಕಣದಲ್ಲಿದ್ದಾರೆ.

ಪ್ರಮುಖ ರಾಜಕೀಯ ಪಕ್ಷಗಳ 56 ಅಭ್ಯರ್ಥಿಗಳೂ ಸೇರಿದಂತೆ ಒಟ್ಟಾರೆ 474 ಅಭ್ಯರ್ಥಿಗಳ ರಾಜಕೀಯ ಹಣೆ ಬರಹವನ್ನು ರಾಜ್ಯದ ಮತದಾರರು ಈಗಾಗಲೇ ಬರೆದಿದ್ದಾರೆ.

# ಧಾರಾಕಾರ ಮಳೆಗೆ ತರಕಾರಿ ನೀರು ಪಾಲು

## ಹಾನಿಗೊಳಗಾದ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರ, ರೈತರ ಸಮಸ್ಯೆ ಆಲಿಸಿದ ಶಾಸಕರು



### ರಸ್ತೆ ಕಾಮಗಾರಿಗೆ 1.50 ಕೋಟಿ ಮಂಜೂರು...

ಮಂಡಲೂರು - ಲಕ್ಕ ಮುತ್ತೇನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ 1.50ಕೋಟಿ ರೂ. ಅನುದಾನ ಮಂಜೂರಾಗಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಕೂಡಲೇ ರಸ್ತೆ ಕಾಮಗಾರಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸರ್ಕಾರದ ಮೇಲೆ ಒತ್ತಡ ಹಾಕಿ ಹಾನಿಗೊಳಗಾದ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ಶಾಸಕ ಕೆ.ಎಸ್.ಬಸವಂತಪ್ಪ ಭರವಸೆ ನೀಡಿದರು.

ದಾವಣಗೆರೆ, ಜೂ. 3- ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಭಾನುವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ರಸ್ತೆಗಳು ಕೊಚ್ಚಿ ಹೋಗಿವೆ. ತರಕಾರಿ ಬೆಳೆಗೆ ಹಾನಿಯಾಗಿದೆ. ಇಷ್ಟೆಲ್ಲ ತೊಂದರೆ ಆಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿಲ್ಲ ಎಂದು ಶಾಸಕ ಕೆ.ಎಸ್.ಬಸವಂತಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ಮಂಡಲೂರು, ಹುಣಸೇಕಟ್ಟೆ, ಕಾಟೇಹಳ್ಳಿ, ಚಿನ್ನಸಮುದ್ರ, ಲಕ್ಕಮುತ್ತೇನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ತಡರಾತ್ರಿ ಸುರಿದ ಧಾರಾಕಾರ ಮಳೆ ಸಾಕಷ್ಟು ಅವಾಂತರ ಸೃಷ್ಟಿ ಮಾಡಿದೆ. ಅಣಜಿ ಹಳ್ಳ ರಭಸವಾಗಿ ಹರಿದು ಮಂಡಲೂರು-ಗೊಲ್ಲರಹಟ್ಟಿ ಸಂಪರ್ಕ ರಸ್ತೆ, ಮಂಡಲೂರು-ಲಕ್ಕಮುತ್ತೇನಹಳ್ಳಿ ರಸ್ತೆ ಹಾಗೂ ಮಂಡಲೂರು - ಕಾಟೇಹಳ್ಳಿ ತಾಂಡಾ, ಕದರಪ್ಪನಹಟ್ಟಿ ರಸ್ತೆಗಳ ಸಂಪರ್ಕ ಸೇತುವೆಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ಅಲ್ಲದೇ ಹುಣಸೇಕಟ್ಟೆ ಗ್ರಾಮದ ಶೇಖರಪ್ಪ ತನ್ನ ನಾಲ್ಕು ಎಕರೆಯಲ್ಲಿ ಬೆಳೆದಿದ್ದ ಟೊಮ್ಯಾಟೋ, ಮೆಣಸಿನಕಾಯಿ ನೀರಿನಲ್ಲಿ ಕೊಚ್ಚಿ ಹೋಗಿವೆ. ಅಡಿಕೆ ತೋಟಗಳಿಗೂ ನೀರು ನುಗ್ಗಿ ಬೆಳೆ ನಷ್ಟವಾಗಿದೆ. ಮಳೆಯಿಂದ ಇಷ್ಟೆಲ್ಲ ರಸ್ತೆಗಳು ಮತ್ತು ಬೆಳೆ ಹಾನಿಯಾಗಿದ್ದರೂ ಒಬ್ಬ ಅಧಿಕಾರಿಗಳೂ ಭೇಟಿ ನೀಡಿಲ್ಲ. ಶಾಸಕರು ಬಂದು ಪರಿಶೀಲನೆ ನಡೆಸಿದ್ದರೂ ಕೂಡ ಲೋಕೋಪಯೋಗಿ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ. ಗ್ರಾಮಸ್ಥರಿಗೆ, ರೈತರಿಗೆ ಇಷ್ಟು ತೊಂದರೆ ಆಗಿದ್ದರೂ ಅವರ ಸಮಸ್ಯೆಗಳನ್ನು ಆಲಿಸುವ ಸೌಜನ್ಯವಿಲ್ಲ. ಕೂಡಲೇ ಸಂಬಂಧಪಟ್ಟ ಮೇಲಾಧಿಕಾರಿಗಳು ಇವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ಒತ್ತಾಯಿಸಿದರು.

ರಾಷ್ಟ್ರೀಯ ಹೆದ್ದಾರಿ-48ರ ಹುಣಸೇಕಟ್ಟೆ ಗ್ರಾಮದ ಬಳಿ ಅವೈಜ್ಞಾನಿಕ ಸೇತುವೆ ನಿರ್ಮಾಣದಿಂದ ಮಳೆ ಬಂದಾಗ ಗುಡ್ಡದಿಂದ ಹರಿದು ಬರುವ ನೀರು ಹುಣಸೇಕಟ್ಟೆ ಗ್ರಾಮಕ್ಕೆ ನುಗ್ಗಿ ಅವಾಂತರ ಸೃಷ್ಟಿ ಮಾಡುತ್ತಿದೆ. ಹೆದ್ದಾರಿ ಸೇತುವೆ ಬಳಿ ಮಳೆ ನೀರು ಹರಿದು ಹೋಗಲು ಸಣ್ಣ ಸಣ್ಣ ಸಿಮೆಂಟ್ ಪೈಪ್ ಅಳವಡಿಸಿದ್ದರಿಂದ ಹೂಳು ತುಂಬಿ ನೀರು ಸರಾಗವಾಗಿ ಹರಿಯದೆ ಗುಡ್ಡದಿಂದ ಬರುವ ನೀರು ಗ್ರಾಮಕ್ಕೆ ನುಗ್ಗುತ್ತಿದೆ. ಕೂಡಲೇ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳ ಅವೈಜ್ಞಾನಿಕ ಕಾಮಗಾರಿ ಸರಿಪಡಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶಿವು, ರಮೇಶ್, ಕುಮಾರ್, ಗಿರೀಶ್, ನಾಗೇಂದ್ರಪ್ಪ, ಕಲ್ಲಿಂಗಪ್ಪ, ಕಂಟಪ್ಪ, ಪ್ರಕಾಶ್ ಸೇರಿದಂತೆ, ಗ್ರಾಮಸ್ಥರು ಹಾಜರಿದ್ದರು.



# ಬೆಂಗಳೂರಿನಲ್ಲಿ 133 ವರ್ಷಗಳ ದಾಖಲೆ ಮುರಿದ ಮಳೆ

ಬೆಂಗಳೂರು, ಜೂ. 3 – ಬೆಂಗಳೂರಿನಲ್ಲಿ ಒಂದೇ ದಿನ 111 ಮಿ.ಮೀ. ದಾಖಲೆಯ ಮಳೆಯಾಗಿದೆ. ಜೂನ್ ತಿಂಗಳಲ್ಲಿ ಕಳೆದ 133 ವರ್ಷಗಳಲ್ಲಿ ಎಂದೂ ಇಷ್ಟು ಮಳೆಯಾಗಿರಲಿಲ್ಲ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಜೂನ್ 1 ಹಾಗೂ 2ರಂದು ಒಟ್ಟಾರೆ 140.7 ಮಿ.ಮೀ. ಮಳೆಯಾಗಿದೆ. ಇದು ಜೂನ್ ತಿಂಗಳಲ್ಲಿ ಆಗುವ ಒಟ್ಟು ಮಳೆಗಿಂತ ಹೆಚ್ಚಿನ ಪ್ರಮಾಣವಾಗಿದೆ ಎಂದು ಹವಾಮಾನ ಇಲಾಖೆಯ ವಿಜ್ಞಾನಿ ಎನ್. ಪುವಿಯರಸನ್ ಹೇಳಿದ್ದಾರೆ.

ಜೂನ್ 2ರಂದು 111 ಮಿ.ಮೀ. ಮಳೆಯಾಗಿದೆ. ಆದರೆ, ಜೂನ್ ತಿಂಗಳ ಸರಾಸರಿ ಮಳೆಯ ಪ್ರಮಾಣ 110.3 ಮಿ.ಮೀ. ಆಗಿದೆ. ಈ ಹಿಂದೆ ಜೂನ್ 16, 1891ರಂದು ಒಂದೇ ದಿನ ಇಷ್ಟು ಧಾರಾಕಾರ ಮಳೆ ಸುರಿದಿತ್ತು.

ಮಳೆಯಿಂದಾಗಿ ಜಯನಗರ ಸೇರಿದಂತೆ ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಟ್ರಿನಿಟಿ ಮೆಟ್ರೋ ಬಳಿಯ ಮೆಟ್ರೋ ರೈಲು ಮಾರ್ಗದಲ್ಲಿ ಮರ ಬಿದ್ದಿತ್ತು. ಇದರಿಂದಾಗಿ ಸಂಚಾರಕ್ಕೆ ಸಮಸ್ಯೆಯಾಯಿತು ಹಲವೆಡೆ ಉರುಳಿದ ಮಳೆ ಹಾಗೂ ಜಲಾವೃತಗೊಂಡ ರಸ್ತೆಗಳಿಂದಾಗಿ ಸಂಚಾರ ಅಸ್ತವ್ಯಸ್ತವಾಗಿತ್ತು.

ಕರ್ನಾಟಕದಲ್ಲಿ ಮುಂಗಾರು ಮುಂದುವರೆದಿದ್ದು ಹಲವಾರು ಜಿಲ್ಲೆಗಳಿಗೆ ಜೂನ್ 5ರವರೆಗೆ ಹಳದಿ ಎಚ್ಚರಿಕೆ ನೀಡಲಾಗಿದೆ ಎಂದು ಬೆಂಗಳೂರು ಹವಾಮಾನ ಕೇಂದ್ರದ ಮುಖ್ಯಸ್ಥ ಸಿ.ಎಸ್. ಪಾಟೀಲ್ ಹೇಳಿದ್ದಾರೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ವಿಜಯಪುರ, ಬಳ್ಳಾರಿ, ಬೆಂಗಳೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಚಿತ್ರದುರ್ಗ, ಹಾಸನ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಧಾರಾಕಾರ ಮಳೆಯಾಗಲಿದೆ ಎಂದವರು ತಿಳಿಸಿದ್ದಾರೆ.

# ಕುಟುಂಬಕ್ಕೆ ಕೊಲೆ ಬೆದರಿಕೆ ಕರೆ


**(1ನೇ ಪುಟದಿಂದ)** ಎತ್ತಿ ಬಿಡುತ್ತೇವೆ' ಎಂದರು. 'ಯಾರು ನೀವು ಎನ್ನುತ್ತಿದ್ದಂತೆ' ಫೋನ್ ಸಂಪರ್ಕ ಕಡಿತಗೊಳಿಸಿದ್ದಾರೆ. ಈ ರೀತಿಯ ಬೆದರಿಕೆ ಕರೆಗಳು ಎರಡು ವರ್ಷಗಳ ಹಿಂದೆಯೂ ದುಬೈಯಿಂದ ಬಂದಿದ್ದು, ಬೆಂಗಳೂರು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಅಂದು ಆಡಿಯೋದೊಂದಿಗೆ ದೂರು ದಾಖಲಿಸಿದ್ದನ್ನು ಹೊನ್ನಾಳಿ ಪೊಲೀಸ್ ಠಾಣೆ ಎದುರು ಮಾಧ್ಯಮದವರಿಗೆ ವಿವರಿಸಿದರು.

ನನ್ನ ಹಾಗೂ ನನ್ನ ಕುಟುಂಬವನ್ನು ಮುಗಿಸಿಬಿಡುತ್ತೇವೆ ಎನ್ನುವ ದೂರವಾಣಿ ಕರೆಗಳ ನಂಬರ್‌ಗಳನ್ನು ದೂರಿನಲ್ಲಿ ನಮೂದಿಸಿದ್ದೇನೆ. ಕೊಲೆ ಬೆದರಿಕೆಯ ಆರೋಪಿಗಳನ್ನು ಕಂಡುಹಿಡಿದು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮೂಲಕ ನನ್ನ ಹಾಗೂ ನನ್ನ ಕುಟುಂಬಕ್ಕೆ ರಕ್ಷಣೆ ನೀಡಬೇಕಿದೆ ಎಂದರು.

ಅನಾಮಧೇಯ ಕರೆಗಳನ್ನು, ಮಾಡಿ ಜೀವ ಬೆದರಿಕೆ ಹಾಕುತ್ತಿರುವ ಬಗ್ಗೆ ಹೊನ್ನಾಳಿ ಪೋಲಿಸರು, ಡಿವೈಎಸ್ಪಿ ಹಾಗೂ ಎಸ್ಪಿ ಅವರು ಗಂಭೀರವಾಗಿ ಪರಿಗಣಿಸುವಂತೆ ಒತ್ತಾಯಿಸಿರುವರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್, ಬಿಜೆಪಿ ಮುಖಂಡರಾದ ಮಾರುತಿ ನಾಯ್ಕ, ಕುಳಗಟ್ಟೆ ರಂಗಣ್ಣ ಇನ್ನಿತರರಿದ್ದರು.

# ತೆಗ್ಗಿನ ಮಠದ ಶ್ರೀಗಳಿಂದ ಮತದಾನ



ಹರಪನಹಳ್ಳಿ, ಜೂ.3- ಪಟ್ಟಣದ ತೆಗ್ಗಿನ ಮಠದ ವರಸದ್ಯೋಜಾತ ಶ್ರೀಗಳು ತಮ್ಮ ಹಕ್ಕು ಚಲಾಯಿಸಿದರು.

# ಅಧಿಕ ಮತಗಳ ಅಂತರದಿಂದ ಶ್ರೀನಿವಾಸ್ ಗೆಲುವು : ವಿಶ್ವಾಸ




ಹರಿಹರ,ಜೂ.3- ಇಂದು ನಡೆದ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ತಾಲ್ಲೂಕಿನಲ್ಲಿ ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಅವರು ಅಧಿಕ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂಬ ವಿಶ್ವಾಸ ಹೊಂದಿರುವುದಾಗಿ ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್ ಹೇಳಿದರು.

ನಗರದ ಜಿ.ಬಿ.ಎಂ. ಎಸ್. ಶಾಲಾ ಕೊಠಡಿಯಲ್ಲಿ ನಡೆದ ಆಗ್ನೇಯ ಶಿಕ್ಷಕರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಪರ ಮತಯಾಚನೆ ಮಾಡಿದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಹಲವಾರು ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾ ಶಿಕ್ಷಕರ ಕಷ್ಟಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ತಮ್ಮದೇ ಆದ ರೀತಿಯಲ್ಲಿ ಸೇವೆ ಮಾಡುತ್ತಾ ಬಂದಿದ್ದಾರೆ.

ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿ ಕಡಿಮೆ ಮತಗಳ ಅಂತರದಿಂದ ಪರಾಜಿತರಾದರೂ ಸಹ ಶಿಕ್ಷಕರ ಜೊತೆಗೆ ಸದಾ ಕಾಲ ಒಡನಾಟದಲ್ಲಿ ಇರುವುದರಿಂದ ಮತ್ತು ಅವರು ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರಿಂದ ಅವರಿಗೆ ಈ ಬಾರಿ ಬಹುಮತದೊಂದಿಗೆ ಜಯ ಖಂಡಿತವಾಗಿ ಲಭಿಸುತ್ತದೆ ಎಂಬ ವಿಶ್ವಾಸ ಹೊಂದಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಬಿ. ರೇವಣಸಿದ್ದಪ್ಪ, ಗುತ್ತೂರು ಜಿ.ಬಿ. ಹಾಲೇಶಗೌಡ್ರು, ಏಜಾಜ್ ಆಹ್ಮದ್, ಕೆ. ಜಿ. ಸಿದ್ದೇಶ್, ಎಲ್.ಬಿ. ಹನುಮಂತಪ್ಪ, ಎಂ.ಬಿ ಅಬಿದಾಲಿ, ಟಿ.ಜೆ. ಮುರುಗೇಶಪ್ಪ, ಮಹಮ್ಮದ್ ಫೈರೋಜ್, ಬಿ.ಎನ್. ರಮೇಶ್, ಸಂತೋಷ ನೋಟದರ್, ಅರುಣ್ ಬೊಂಗಾಳೆ, ನಾಗೇಂದ್ರಪ್ಪ ರಾಜನಹಳ್ಳಿ, ನಿಧಿ, ರಮೇಶ್ ನಾಯ್ಕ್, ಜೋಸೆಫ್ ದಿವಾಕರ್, ಕೆ.ಬಿ. ರಾಜಶೇಖರ್, ಸಂತೋಷ ದೊಡ್ಡಮನೆ, ಶ್ರೀನಿವಾಸ್ ಮೂರ್ತಿ, ಬಾಷಾ, ಯಮನೂರು, ಶಿವಪ್ಪ, ಆನಂದ್, ಭಾಗ್ಯಮ್ಮ, ನಾಗಮ್ಮ, ಪ್ರಕಾಶ್ ಇತರರು ಹಾಜರಿದ್ದರು.



# ಜಿಗಳಿಯಲ್ಲಿ ಸ.ಹಿ.ಪ್ರಾ.ಶಾಲೆಯಲ್ಲಿ ಪಠ್ಯಪುಸ್ತಕ, ಸಮವಸ್ತ್ರ ವಿತರಣೆ

ಮಲೇಬೆನ್ನೂರು, ಜೂ.3- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ವಿದ್ಯಾರ್ಥಿಗಳಿಗೆ ಸರ್ಕಾರದ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಮಾತನಾಡಿ, ಸರ್ಕಾರ ಶಿಕ್ಷಣಕ್ಕೆ ಒತ್ತು ನೀಡಿದ್ದು, ಮಕ್ಕಳಿಗೆ ಉಚಿತ ಶಿಕ್ಷಣ, ಪಠ್ಯ ಪುಸ್ತಕ, ಸಮವಸ್ತ್ರ, ಬಿಸಿಯೂಟ, ಹಾಲು, ಮೊಟ್ಟೆ, ಬಾಳೆಹಣ್ಣು ಮತ್ತು ವಿದ್ಯಾರ್ಥಿ ವೇತನವನ್ನು ನೀಡುತ್ತಿದೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕ ಗುಡ್ಡಪ್ಪ ಅವರು, ಶಿಕ್ಷಣದ ಮಹತ್ವ ತಿಳಿಸಿ, ಪೋಷಕರು ಸರ್ಕಾರದ ಸೌಲಭ್ಯ ಪಡೆದರೆ ಸಾಲದು. ಮಕ್ಕಳ ಶಿಕ್ಷಣದ ಬಗ್ಗೆ ನಿಗಾ ವಹಿಸಬೇಕೆಂದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ವಿ. ನಾಗರಾಜ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಸಿಗುವ ಶಿಕ್ಷಣ ಬೇರೆ ಯಾವ ಶಾಲೆಗಳಲ್ಲೂ ಸಿಗುವುದಿಲ್ಲ ಎಂದರು.

ಎಸ್‌ಡಿಎಂಸಿ ಉಪಾಧ್ಯಕ್ಷೆ ಶ್ರೀಮತಿ ಮಂಜುಳಾ ಮಾಲತೇಶ್ ಅಧ್ಯಕ್ಷತೆ ವಹಿಸಿದ್ದರು.

ಗ್ರಾ.ಪಂ. ಮಾಜಿ ಅಧ್ಯಕ್ಷೆ ಶ್ರೀಮತಿ ಕವಿತಾ ಮಾಕನೂರು ಶಿವು, ಪತ್ರಕರ್ತ ಪ್ರಕಾಶ್, ಎಸ್‌ಡಿಎಂಸಿ ಸದಸ್ಯರಾದ ಶ್ರೀಮತಿ ರೇಣುಕಾ ನಿಂಗಪ್ಪ, ಶ್ರೀಮತಿ ರತ್ನಮ್ಮ ಬಸವರಾಜ್, ಎಲ್‌ಕೆಜಿ, ಯುಕೆಜಿ ಕಲಿಕಾ ಕೇಂದ್ರದ ಅಧ್ಯಕ್ಷ ಕೆ.ಎಸ್. ಮಾಲತೇಶ್, ಮಾಜಿ ಅಧ್ಯಕ್ಷ ಡಿ. ಪಿ.ಚಿದಾನಂದ್, ಶಿಕ್ಷಕರಾದ ಲಿಂಗರಾಜ್, ಲೋಕೇಶ್, ಕರಿಬಸಮ್ಮ, ಜಯಶ್ರೀ ಮತ್ತಿತರರು ಭಾಗವಹಿಸಿದ್ದರು.

ಶಾಲಾ ಮುಖ್ಯ ಶಿಕ್ಷಕ ನಾಗೇಶ್ ಸ್ವಾಗತಿಸಿದರು. ಶಿಕ್ಷಕ ಮಲ್ಲಿಕಾರ್ಜುನ್ ನಿರೂಪಿಸಿ, ವಂದಿಸಿದರು.

# ಎಂ.ಜಿ.ಈಶ್ವರಪ್ಪ ನಿಧನಕ್ಕೆ ಮಹೇಶ ಜೋಶಿ ಸಂತಾಪ

ಬೆಂಗಳೂರು, ಜೂ. 3- ಶಿಕ್ಷಣ ತಜ್ಞ, ಜಾನಪದ ವಿದ್ವಾಂಸ ಡಾ.ಎಂ.ಜಿ.ಈಶ್ವರಪ್ಪನವರ ನಿಧನಕ್ಕೆ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ತೀವ್ರ ಸಂತಾಪವನ್ನು ಸೂಚಿಸಿದ್ದಾರೆ.

ಜಾನಪದ ವಿದ್ವಾಂಸ ಡಾ.ಜೀ.ಶಂ. ಪರಮಶಿವಯ್ಯನವರ ನೆಚ್ಚಿನ ಶಿಷ್ಯರಾಗಿದ್ದ ಈಶ್ವರಪ್ಪನವರು, ಚಿತ್ರದುರ್ಗವನ್ನು ಕೇಂದ್ರವಾಗಿರಿಸಿದ ಮಧ್ಯ ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಳನ್ನು ಮಾಡಿದ್ದರು ಎಂದು ನೆನಪು ಮಾಡಿ ಕೊಂಡಿರುವ ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಅವರು ನಿಕಟ ಸಂಬಂಧ ಇಟ್ಟುಕೊಂಡಿದ್ದನ್ನು ಸ್ಮರಿಸಿ, 1992ರಲ್ಲಿ ದಾವಣಗೆರೆಯಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಭೂತಪೂರ್ವ ಯಶಸ್ಸು ಕಾಣಲು ಈಶ್ವರಪ್ಪನವರ ದಕ್ಷತೆಯೇ ಕಾರಣವೆಂದು ನೆನಪು ಮಾಡಿ ಕೊಂಡಿದ್ದಾರೆ.

# 64.2 ಕೋಟಿ ಜನರಿಂದ ಮತದಾನ ವಿಶ್ವ ದಾಖಲೆ

**(1ನೇ ಪುಟದಿಂದ)** ಕುಮಾರ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ 31.2 ಕೋಟಿ ಮಹಿಳಾ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ ಎಂದರು.

68 ಸಾವಿರ ನಿಗಾ ತಂಡಗಳು ಹಾಗೂ 1.560 ಕೋಟಿ ಮತದಾನ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿ ವಿಶ್ವದ ಅತಿ ದೊಡ್ಡ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರು ಎಂದೂ ಅವರು ಹೇಳಿದರು.

# ಎನ್‌ಡಿಎಗೆ 340ಕ್ಕೂ ಹೆಚ್ಚು ಸ್ಥಾನ ಎಂದು ಬುಕೀಗಳ ಅಂದಾಜು

ನವದೆಹಲಿ, ಜೂ. 3 – ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. 340ಕ್ಕೂ ಹೆಚ್ಚು ಸ್ಥಾನ ಗಳಿಸಲಿದೆ ಎಂದು ದೆಹಲಿಯ ಬುಕೀಗಳ ವಲಯದಲ್ಲಿ ಅಭಿಪ್ರಾಯ ಕೇಳಿ ಬರುತ್ತಿದೆ.

ದೆಹಲಿಯ ಬುಕೀಗಳ ಅಭಿಪ್ರಾಯದ ಪ್ರಕಾರ, ಎನ್.ಡಿ.ಎ. ಮೈತ್ರಿಕೂಟ 341ರಿಂದ 343 ಸ್ಥಾನ ಪಡೆಯಲಿದೆ. ಐ.ಎನ್.ಡಿ.ಐ.ಎ. ಮೈತ್ರಿಕೂಟ 198ರಿಂದ 200 ಸ್ಥಾನ ಪಡೆಯಲಿದೆ ಎಂದು ಬುಕೀಗಳ ಜಾಲದ ಮೂಲಗಳು ತಿಳಿಸಿವೆ.

ಬಿಜೆಪಿ ಸ್ವಂತ ಬಲದ ಮೇಲೆ 310ರಿಂದ 313 ಸ್ಥಾನ ಪಡೆಯಬಹುದು. ಕಾಂಗ್ರೆಸ್ ಸ್ವಂತ ಬಲದಿಂದ 57ರಿಂದ 59 ಸ್ಥಾನ ಪಡೆಯಬಹುದು ಎಂದು ಬುಕೀಗಳು ಅಂದಾಜಿಸಿದ್ದಾರೆ.

ಎರಡು ವಾರಗಳಿಂದ ಬೆಟ್ಟಿಂಗ್ ವಲಯ ಕಾರ್ಯತತ್ಪರವಾಗಿದೆ. ದೆಹಲಿ ವಲಯದಲ್ಲಿ ಕೋಟಿಗಟ್ಟಲೆ ಬೆಟ್ಟಿಂಗ್ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಭಾರತದಲ್ಲಿ ಬೆಟ್ಟಿಂಗ್ ಕಾನೂನು ಬಾಹಿರವಾಗಿದ್ದು, ಪೊಲೀಸರು ಈ ಚಟುವಟಿಕೆಗಳ ಮೇಲೆ ಕಣ್ಣಿರಿಸಿದ್ದಾರೆ.

# ದಾವಿವಿಯಲ್ಲಿ ಬೆಳಿಗ್ಗೆ 8ರಿಂದ ಮತ ಎಣಿಕೆ

**(1ನೇ ಪುಟದಿಂದ)** ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು ಪ್ರತಿ ಕ್ಷೇತ್ರದಲ್ಲಿ 14 ಟೇಬಲ್‌ಗಳಲ್ಲಿ ಎಣಿಕೆ ನಡೆಯಲಿದ್ದು ಒಂದು ಸುತ್ತಿಗೆ 112 ಮತಗಟ್ಟೆಗಳ ಎಣಿಕೆ ನಡೆಯಲಿದೆ ಎಂದರು.

ಕ್ಷೇತ್ರದಲ್ಲಿ 1946 ಮತಗಟ್ಟೆಗಳಿದ್ದು ಕನಿಷ್ಠ 16 ಹಾಗೂ ಗರಿಷ್ಠ 19 ಸುತ್ತುಗಳಲ್ಲಿ ಮತ ಎಣಿಕೆ ನಡೆಯಲಿದೆ. ಪ್ರತಿ ಎಣಿಕೆ ಟೇಬಲ್‌ನಲ್ಲಿ ಎಣಿಕೆ ವೀಕ್ಷಕರು, ಎಣಿಕೆ ಸಹಾಯಕರು, ಮೈಕ್ರೋ ಅಬ್ಸರ್‌ವರ್‌ಗಳು ಕಾರ್ಯನಿರ್ವಹಿಸುವರು. ಮತ್ತು ಅಂಚೆ ಮತ ಎಣಿಕೆಗೆ 12 ಟೇಬಲ್‌ಗಳನ್ನು ಹಾಕಲಾಗಿದ್ದು ಸೇವಾ ಮತದಾರರ ಮತ ಎಣಿಕೆಗೆ 1 ಟೇಬಲ್‌ನಲ್ಲಿ ಎಣಿಕೆ ನಡೆಯಲಿದೆ.

ಎಣಿಕೆ ಪ್ರಕ್ರಿಯೆಯು ಜೂನ್ 4 ರ ಬೆಳಗ್ಗೆ 6.30 ರಿಂದ ಪ್ರಾರಂಭವಾಗಲಿದ್ದು ಮೊದಲು ಅಂಚೆ ಮತ ಎಣಿಕೆ ಆರಂಭವಾಗಲಿದ್ದು 8 ಗಂಟೆಗೆ ಜೊತೆಯಲ್ಲಿಯೇ ವಿದ್ಯುನ್ಮಾನ ಮತ ಯಂತ್ರದ ಎಣಿಕೆ ಕಾರ್ಯ ಆರಂಭವಾಗಲಿದೆ. ಪ್ರತಿ ಸುತ್ತಿನ ಎಣಿಕೆ ಮುಕ್ತಾಯವಾದ ನಂತರ ಧ್ವನಿವರ್ಧಕದ ಮೂಲಕ ಸಾರ್ವಜನಿಕರಿಗೆ ಫಲಿತಾಂಶ ಪ್ರಚಾರಪಡಿಸಲಾಗುತ್ತದೆ ಎಂದರು.

# ಪ್ರಚಾರದಲ್ಲಿ ಅಪ್ರಾಪ್ತರು : ಅಮಿತ್ ಷಾ, ಕಿಶನ್ ರೆಡ್ಡಿ ಹೆಸರು ಬಿಟ್ಟ ಪೊಲೀಸರು

ಹೈದರಾಬಾದ್, ಜೂ 3 – ಚುನಾವಣಾ ಪ್ರಚಾರದ ವೇಳೆ ಅಪ್ರಾಪ್ತರನ್ನು ಬಳಸಿಕೊಳ್ಳಲಾಗಿದೆ ಎಂಬ ಆರೋಪದ ಮೇಲೆ ದಾಖಲಿಸಲಾಗಿದ್ದ ಎಫ್.ಐ.ಆರ್.ನಿಂದ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ತೆಲಂಗಾಣ ಬಿಜೆಪಿ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಅವರ ಹೆಸರುಗಳನ್ನು ತೆಗೆದು ಹಾಕಲಾಗಿದೆ.

ತೆಲಂಗಾಣ ಮುಖ್ಯ ಚುನಾವಣಾ ಅಧಿಕಾರಿಗೆ ಪತ್ರ ಬರೆದಿದ್ದ ತಮಿಳುನಾಡು ಕಾಂಗ್ರೆಸ್ ಉಪಾಧ್ಯಕ್ಷ ಜಿ. ನಿರಂಜನ್, ಮೇ 1ರಂದು ನಡೆದ ಬಿಜೆಪಿ ಸಮಾವೇಶದಲ್ಲಿ ಅಪ್ರಾಪ್ತರು ಅಮಿತ್ ಷಾ ವೇದಿಕೆಯಲ್ಲಿದ್ದರು ಎಂದು ಹೇಳಿದ್ದರು.

ನಂತರದಲ್ಲಿ ಈ ಬಗ್ಗೆ ಷಾ, ರೆಡ್ಡಿ, ಬಿಜೆಪಿ ಅಭ್ಯರ್ಥಿ ಕೆ. ಮಾಧವಿ ಲತಾ, ಶಾಸಕ ಟಿ. ರಾಜಾ ಸಿಂಗ್ ಹಾಗೂ ಬಿಜೆಪಿ ನಾಯಕ ಟಿ.ಯಮನ್ ಸಿಂಗ್ ವಿರುದ್ಧ ಆರೋಪ ಪಟ್ಟಿ ದಾಖಲಿಸಲಾಗಿತ್ತು.

ನಂತರ ತನಿಖೆ ನಡೆಸಿದಾಗ ಈ ಘಟನೆಯಲ್ಲಿ ಅಮಿತ್ ಷಾ ಹಾಗೂ ಕಿಶನ್ ರೆಡ್ಡಿ ಪಾತ್ರವಿಲ್ಲ ಎಂಬುದು ಕಂಡು ಬಂದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಳೆದ ವಾರ ಸ್ಥಳೀಯ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

# ಹಣ ಹಂಚಲು ಯತ್ನಿಸುತ್ತಿದ್ದ ಇಬ್ಬರ ಸೆರೆ

**(1ನೇ ಪುಟದಿಂದ)** ಮೇರೆಗೆ ತಹಶೀಲ್ದಾರ್ ಪುರಂದರ ಹೆಗ್ಡೆ, ಎಫ್.ಎಸ್.ಟಿ. ತಂಡದ ತೋಟಗಾರಿಕಾ ಇಲಾಖಾಧಿಕಾರಿ ಶಶಿಧರ್ ಮತ್ತು ಹೊನ್ನಾಳಿ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಮುದ್ದುರಾಜ್ ಮಾರ್ಗದರ್ಶನದಲ್ಲಿ ಪಿ.ಎಸ್.ಐ. ಶಾಂತಲಾ ಇವರುಗಳ ತಂಡ ವಶಕ್ಕೆ ಪಡೆದಿದೆ.

# ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ : ಹರಿಹರದಲ್ಲಿ ಶೇ. 97.18 ಶಾಂತಿಯುತ ಮತದಾನ


ಹರಿಹರ, ಜೂ.3- ನಗರದಲ್ಲಿ ನಡೆದ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಶೇ 97.18 ರಷ್ಟು ಶಾಂತಿಯುತ ಮತದಾನವಾಗಿದೆ.

ಜಿ.ಬಿ.ಎಂ.ಎಸ್. ಪ್ರೌಢಶಾಲಾ ಕೊಠಡಿಯಲ್ಲಿ ನಡೆದ ಚುನಾವಣೆಯಲ್ಲಿ 297 ಪುರುಷ ಮತದಾರರು ಹಾಗೂ 151 ಮಹಿಳಾ ಮತದಾರರು ಸೇರಿದಂತೆ ಒಟ್ಟು 448 ಶಿಕ್ಷಕ ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದರು.

ಉಪವಿಭಾಗಾಧಿಕಾರಿ ದುರ್ಗಾಶ್ರೀ ಅವರು ಚುನಾವಣೆ ಕೊಠಡಿಯನ್ನು ಪರಿಶೀಲನೆ ನಡೆಸಿ, ಚುನಾವಣೆ ಸಿಬ್ಬಂದಿಗಳಿಂದ ಮಾಹಿತಿ ಸಂಗ್ರಹಿಸಿದರು.

ಚುನಾವಣಾ ಕೊಠಡಿಯ ಹೊರಗಡೆ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿ ವೈ.ಎ. ನಾರಾಯಣಸ್ವಾಮಿ ಪರವಾಗಿ ಮತ್ತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್, ಪಕ್ಷೇತರ ಅಭ್ಯರ್ಥಿ ವಿನೋದ ಶಿವರಾಜ್ ಮತ್ತು ಲೋಕೇಶ್ ತಾಳಿಕಟ್ಟೆ ಅವರ ಪರವಾಗಿರುವ, ಕಾರ್ಯಕರ್ತರು, ಅಭಿಮಾನಿಗಳು ಮತಯಾಚನೆ ಮಾಡಿದರು.

ಚುನಾವಣೆ ಸ್ಕ್ವಾಡ್ ಆಗಿ ಬಿಇಓ ಹನುಮಂತಪ್ಪ, ಲೋಕೋಪಯೋಗಿ ಇಲಾಖೆ ಎಇಇ ಶಿವಮೂರ್ತಿ, ಪಶುಪಾಲನೆ ಇಲಾಖೆಯ ಸಿದ್ದೇಶ್ ಯಾವುದೇ ರೀತಿಯ ಚುನಾವಣೆ ಅಕ್ರಮಗಳು ನಡೆಯದಂತೆ ಎಚ್ಚರಿಕೆ ವಹಿಸಿದ್ದರು.



ಸಿಪಿಐ ಸುರೇಶ್ ಸರಗಿ, ಪಿಎಸ್ಐ ದೇವಾನಂದ್, ಎಎಸ್ಐ ಮನ್ಸೂರ್ ಆಹ್ಮದ್, ಪೊಲೀಸ್ ಸಿಬ್ಬಂದಿಗಳಾದ ಬಿ. ಎಂ. ಸಿರಿಗೆರೆ, ರಿಜ್ವಾನ್, ಇತರರು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರು.

ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಗುತ್ತೂರು ಜಿ ಬಿ. ಹಾಲೇಶಗೌಡ್ರು, ಟಿ.ಜೆ. ಮುರುಗೇಶಪ್ಪ, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಎ.ಬಿ. ವಿಜಯಕುಮಾರ್, ಅಬ್ದುಲ್ ಅಲೀಂ, ಕೆ.ಪಿ.ಸಿ.ಸಿ. ಸದಸ್ಯ ಬಿ. ರೇವಣಸಿದ್ದಪ್ಪ, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಎಂ.ಬಿ. ಅಬಿದಾಲಿ, ನಗರಸಭೆ ನಾಮನಿರ್ದೇಶನ ಸದಸ್ಯರಾದ ಕೆ.ಬಿ. ರಾಜಶೇಖರ್, ಸಂತೋಷ್ ದೊಡ್ಡಮನಿ, ಜೋಸೆಫ್ ದಿವಾಕರ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಐರಣಿ, ಕಾಂಗ್ರೆಸ್ ಪಕ್ಷದ ಮುಖಂಡರಾದ ಸಿ.ಎನ್ ಹುಲುಗೇಶ್, ಸಂತೋಷ ನೋಟದರ್, ಹೆಚ್. ಕೆ. ಕೊಟ್ರಪ್ಪ, ಜೆಡಿಎಸ್ ಪಕ್ಷದ ಮುಖಂಡರಾದ ಅಡಕಿ ಕುಮಾರ್, ಹಾಲಸ್ವಾಮಿ, ಶಿಕ್ಷಕರಾದ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಈಶಪ್ಪ ಬೂದಿಹಾಳ, ವಿ.ಬಿ. ಕೊಟ್ರೇಶ್, ಬಿ.ಬಿ. ರೇವಣ್ಣನಾಯ್ಕ್, ಡಿ. ಎಂ. ಮಂಜುನಾಥಯ್ಯ, ರೇವಣಸಿದ್ದಪ್ಪ, ಎ. ರಿಯಾಜ್ ಆಹ್ಮದ್, ಧನರಾಜ್, ಬಾಷಾ, ಶಿವಮೂರ್ತಿ, ರೀನಾ, ಪ್ರಕಾಶ್ ಭಾನುವಳ್ಳಿ, ಜಯಣ್ಣ, ತಿಪ್ಪಣ್ಣರಾಜ್, ನಿವೃತ್ತ ಶಿಕ್ಷಕರಾದ ಕೃಷ್ಣಮೂರ್ತಿ ಶೆಟ್ಟಿ ಎಂ.ಎನ್. ಬಸವರಾಜಪ್ಪ ಹಾಜರಿದ್ದರು.

# ಬಸಾಪುರದಲ್ಲಿ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ



**ಮಕ್ಕಳಿಗೆ ಗುಲಾಬಿ ಹೂ ನೀಡುವ ಮೂಲಕ ಸ್ವಾಗತ**

ದಾವಣಗೆರೆ, ಜೂ.3 - ಇಲ್ಲಿಗೆ ಸಮೀಪದ ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಕೆ.ಎಸ್ ರೇವಣಸಿದ್ದಪ್ಪ ರಂಗಮಂದಿರದ ಆವರಣದಲ್ಲಿ ಗುಲಾಬಿ ಹೂ ನೀಡುವ ಮೂಲಕ ನೂತನ ವರ್ಷದ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಲಾಯಿತು.

ಗ್ರಾಮದ ಹರೀಶ್ ಕೆ.ಎಲ್. ಬಸಾಪುರ ಮಕ್ಕಳಿಗೆ ಗುಲಾಬಿ ಹೂ ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಗುರುಸಿದ್ದಯ್ಯ, ಉಪಾಧ್ಯಕ್ಷರಾದ ಶ್ರೀಮತಿ ಮಂಜುಳಾ, ಪ್ರಭಾರಿ ಮುಖ್ಯ ಶಿಕ್ಷಕ ಸಂತೋಷ್ ಕುಮಾರ್ ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

# ಸಚಿವ ನಾಗೇಂದ್ರ ರಾಜೀನಾಮೆ ಕೇಳಿಲ್ಲ : ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಜೂ. 3 - ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ನಾಗೇಂದ್ರ ರಾಜೀನಾಮೆ ಕೇಳಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶೇಷ ತನಿಖಾ ತಂಡದಿಂದ ಪ್ರಾಥಮಿಕ ವರದಿ ಪಡೆದು ನಂತರ ತೀರ್ಮಾನಿಸಲಾಗುವುದು ಎಂದರು. ಲೋಕಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆ ಒಪ್ಪಲು ಸಾಧ್ಯವಿಲ್ಲ, ಕರ್ನಾಟಕದಲ್ಲಿ ನಾವು ಕನಿಷ್ಠ 15 ಸ್ಥಾನಗಳನ್ನು ಗೆಲ್ಲುತ್ತೇವೆ, ಈ ಸಮೀಕ್ಷೆಯನ್ನು ನಾವು ಸಂಪೂರ್ಣ ತಳ್ಳಿಹಾಕುತ್ತೇವೆ ಎಂದರು.

# ಪರಮೋಚ್ಛ ಸಿದ್ಧಾಂತಕ್ಕೆ ಹೆದರಿಕೆಯೇ ಪೆಡಂಭೂತ!

## ಸೋಲಿನ ಭೀತಿಯಿಂದ ವಿಶ್ವದ ದೊಡ್ಡ ಗುಟ್ಟು ಬಗೆಹರಿಸುವ ಪ್ರಯತ್ನಕ್ಕೆ ಯುವ ವಿಜ್ಞಾನಿಗಳ ನಿರಾಸಕ್ತಿ

ನವದೆಹಲಿ, ಜೂ. 3 - ಶತಮಾನದ ಹಿಂದೆ ಅಲ್ಬರ್ಟ್ ಐನ್‌ಸ್ಟೀನ್, ಮ್ಯಾಕ್ಸ್ ಪ್ಲಾಂಕ್ ಮತ್ತಿತರೆ ದಿಗ್ಗಜರ ಕಾರಣದಿಂದ ಭೌತಶಾಸ್ತ್ರ ವಲಯದಲ್ಲಿ ಕ್ರಾಂತಿಕಾರಕ ಬೆಳವಣಿಗೆಗಳಾಗಿದ್ದವು. ಈ ಹಿಂದೆ ನಾವು ಜಗತ್ತು ಹೇಗಿದೆ ಎಂದು ಭಾವಿಸಿದ್ದೆವೋ, ಅದೆಲ್ಲವೂ ಹುಸಿಯಾಗಿ ಜಗತ್ತಿನ ಸ್ವರೂಪದ ಮೇಲೆ ಹೊಸ ಬೆಳಕು ಚೆಲ್ಲಿತ್ತು.

ವಿಶ್ವದ ಹಲವಾರು ಗುಟ್ಟುಗಳನ್ನು ಈ ಮೇಧಾವಿಗಳ ತಂಡ ಒಂದರ ಹಿಂದೊಂದರಂತೆ ಬಯಲಿಗೆ ಎಳೆದಿತ್ತು. ಪರಮಾಣುಗಳ ಬಗ್ಗೆ ಈ ವಿಜ್ಞಾನಿಗಳು ತೆರೆದಿಟ್ಟ ಸತ್ಯಗಳು ಕಾಲ್ಪನಿಕ ಜಗತ್ತನ್ನು ಮೀರಿಸುವ ರೀತಿ ಇದ್ದವು.

ಆದರೆ, ಈ ಕಾಲಘಟ್ಟದಲ್ಲೇ ಕ್ವಾಂಟಂ ಗಾತ್ರದ ಕಣಗಳಿಗೆ ಪ್ರತ್ಯೇಕ ಕ್ವಾಂಟಂ ಸಿದ್ಧಾಂತ ರೂಪುಗೊಂಡರೆ, ದೈತ್ಯ ಕಾಯಗಳಿಗೆ ಅನ್ವಯವಾಗುವ ಐನ್‌ಸ್ಟೀನ್ ಅವರ ಸಾಮಾನ್ಯ ಸಾಪೇಕ್ಷ ಸಿದ್ಧಾಂತ ಪ್ರತ್ಯೇಕವಾಗಿತ್ತು. ಇವೆರಡನ್ನೂ ಒಗ್ಗೂಡಿಸುವ ಎಲ್ಲದರ ಸಿದ್ಧಾಂತ ಒಂದಿದೆ ಎಂಬ ನಂಬಿಕೆ ಆ ಕಾಲದಿಂದಲೂ ಇದೆ.

ಆದರೆ, ಇದುವರೆಗೂ ಎಲ್ಲದರ ಸಿದ್ಧಾಂತವನ್ನು ಪರೀಕ್ಷಿಸಿ ಸಾಬೀತು ಪಡಿಸಲು ಸಾಧ್ಯವಾಗಿಲ್ಲ. ವಿಜ್ಞಾನ ಇಷ್ಟೆಲ್ಲಾ ಮುಂದುವರೆದಿದ್ದರೂ, ಸಾಕಷ್ಟು ವಿಜ್ಞಾನಿಗಳು ಎಲ್ಲದರ ಸಿದ್ಧಾಂತದ ಕಡೆ ಆಸಕ್ತಿ ತೋರುತ್ತಿಲ್ಲ. ಇದಕ್ಕೆ ಸೋಲಿನ ಭೀತಿಯೇ ಪ್ರಮುಖ ಕಾರಣ ಎಂದು ಮ್ಯಾಂಚೆಸ್ಟರ್ ಮೆಟ್ರೋಪಾಲಿಟನ್ ಯೂನಿವರ್ಸಿಟಿಯ ಸಂಶೋಧಕ ಸ್ಯಾಮ್ ಮೆಕೀ ಅಭಿಪ್ರಾಯ ಪಡುತ್ತಾರೆ.

ಎಲ್ಲದರ ಸಿದ್ಧಾಂತ ರೂಪಿಸುವುದು ಅಷ್ಟು ಸುಲಭವಲ್ಲ. ವಿಶ್ವದ ಮೂಲಭೂತ ಶಕ್ತಿಗಳನ್ನು ಒಗ್ಗೂಡಿಸುವ ಸೂತ್ರವನ್ನು ರೂಪಿಸಬೇಕಿದೆ. ಪರಮಾಣು ಕಣಗಳ ಹಂತದವರೆಗೆ ಪ್ರತಿಯೊಂದರ ಚಲನ ಹಾಗೂ ಸ್ಥಿರತೆಗಳನ್ನು ಲೆಕ್ಕ ಹಾಕಬೇಕಿದೆ. ಪರಮೋಚ್ಛವಾದ ಈ ಸವಾಲನ್ನು ಬಗೆ ಹರಿಸುವವರಿಗೆ ವಿಶ್ವದ ಅತ್ಯುನ್ನತ ಗೌರವ ಸಿಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಐನ್‌ಸ್ಟೀನ್ ಕಾಲಘಟ್ಟದ ವಿಜ್ಞಾನಿಗಳು ಎಲ್ಲದರ ಸಿದ್ಧಾಂತಕ್ಕೆ ಆದ್ಯತೆ ನೀಡಿದ್ದರು. ಸ್ವತಃ ಐನ್‌ಸ್ಟೀನ್ ಅವರು ಕೊನೆಯುಸಿರೆಳೆಯುವವರೆಗೂ ಈ ಸಿದ್ಧಾಂತದ ದಿಸೆಯಲ್ಲಿ ಶ್ರಮಿಸಿದ್ದರು. ಎಲ್ಲದರ ಸಿದ್ಧಾಂತದ ಕಡೆಗೆ ಅವರು ಪಟ್ಟ ಹರಸಾಹಸ ಕೆಲವೊಮ್ಮೆ ಲೇವಡಿಗೂ ಕಾರಣವಾಗಿತ್ತು.

ವಿಜ್ಞಾನ ವಲಯಕ್ಕೆ ಐನ್‌ಸ್ಟೀನ್ ನೀಡಿದ ಕೊಡುಗೆ ಕಾರಣದಿಂದ ಅವರನ್ನು ಮಹಾತಾರೆಯಂತೆ ಸ್ಮರಿಸಲಾಗುತ್ತಿದೆ. ಆದರೆ, ಭೌತಶಾಸ್ತ್ರಜ್ಞರಾದ ಆರ್ಥರ್ ಎಡ್ಡಿಂಗ್ಟನ್, ಹರ್ಮಾನ್ ವೈಲ್ ಹಾಗೂ ಗಣಿತಶಾಸ್ತ್ರಜ್ಞ ಡೇವಿಡ್ ಬಿಲ್ಬರ್ಟ್ ಅವರಿಗೆ ಅಂತಹ ಅದೃಷ್ಟ ಸಿಗಲಿಲ್ಲ.

ಎಡ್ಡಿಂಗ್ಟನ್ ಅವರು ಪ್ರಖ್ಯಾತಿ ಪಡೆಯಲು ಸಾಧ್ಯವಾಗದ ಮಹಾ ವಿಜ್ಞಾನಿ. 1919ರಲ್ಲಿ ಅವರು ಗ್ರಹಣದ ವಿಶ್ಲೇಷಣೆ ಮೂಲಕ ಐನ್‌ಸ್ಟೀನ್ ಅವರ ಸಾಪೇಕ್ಷ ಸಿದ್ಧಾಂತ ಸರಿ ಎಂಬುದನ್ನು ಸಾಬೀತು ಪಡಿಸಿದ್ದರು. ಆದರೆ, ಅವರು ಮೂಲಭೂತ ಸಿದ್ಧಾಂತವನ್ನು ಹುಡುಕುವ ಪ್ರಯತ್ನದಲ್ಲಿ ಕಳೆದು ಹೋದರು. ಕೊನೆಯ ದಶಕಗಳಲ್ಲಿ ಅವರು ಎಲ್ಲದರ ಸಿದ್ಧಾಂತದಲ್ಲಿ ಮುಳುಗಿ ವಿಫಲವಾಗಿದ್ದು, ಅವರ ಖ್ಯಾತಿಗೆ ಮಸಿ ಬಳಿದಿತ್ತು.



ನಂತರದಲ್ಲಿ ಭೌತಶಾಸ್ತ್ರಜ್ಞ ರಿಚರ್ಡ್ ಫೇನಮನ್ ಅವರು ಎಲ್ಲದರ ಸಿದ್ಧಾಂತದ ಕಡೆ ಗಮನ ಹರಿಸಿದರಾದರೂ, ನಂತರ ಆ ಪ್ರಯತ್ನ ಕೈಬಿಟ್ಟರು. ಬೇರೆ ವಿಷಯಗಳ ಸಂಶೋಧನೆಯಲ್ಲಿ ಅವರು ನೊಬೆಲ್ ಪ್ರಶಸ್ತಿಯನ್ನೂ ಪಡೆದರು.

ಭೌತಶಾಸ್ತ್ರ ವಲಯದಲ್ಲಿ ಉನ್ನತ ಸಾಧನೆಗೆ ಅವಕಾಶಗಳ ಬಾಗಿಲು ತೆರೆದಿರುವಾಗ, ಸೋಲಿನ ಅಪಾಯ ಹೆಚ್ಚಾಗಿರುವ ಎಲ್ಲದರ ಸಿದ್ಧಾಂತ ಆಕರ್ಷಣೆ ಕಳೆದುಕೊಳ್ಳುತ್ತಾ ಬಂದಿತು. ಆಧುನಿಕ ಯುವ ಹಾಗೂ ಮೇಧಾವಿ ಮನಸ್ಸುಗಳಿಗೆ ವಿಶ್ವದ ಅತಿ ದೊಡ್ಡ ಪ್ರಶ್ನೆಯಾದ ಎಲ್ಲದರ ಸಿದ್ಧಾಂತದ ಬಗ್ಗೆ ಹೆಚ್ಚೇನೂ ಆಸಕ್ತಿ ಉಳಿದಿಲ್ಲ.

ಸ್ಟ್ರಿಂಗ್ ಸಿದ್ಧಾಂತವು ಎಲ್ಲದರ ಸಿದ್ಧಾಂತವಾಗಲಿದೆ ಎಂಬ ನಂಬಿಕೆ ಹಲವರಲ್ಲಿದೆ. ಆದರೆ, ನೊಬೆಲ್ ಪ್ರಶಸ್ತಿ ಪುರಸ್ಕೃತ ರೋಜರ್ ಪೆನ್‌ರೋಸ್ ಅವರು ಸ್ಟ್ರಿಂಗ್ ಸಿದ್ಧಾಂತವು ನಿಜವಾದ ವಿಜ್ಞಾನವೇ ಅಲ್ಲ ಎಂದು ಲೇವಡಿ ಮಾಡುತ್ತಾರೆ.

ಭೌತಶಾಸ್ತ್ರಜ್ಞ ಸ್ಟೀಫನ್ ಹಾಕಿಂಗ್ ಅವರು ಸ್ಟ್ರಿಂಗ್ ಸಿದ್ಧಾಂತ ವಿಭಾಗವಾದ ಎಂ-ಥಿಯರಿಯು ಎಲ್ಲದರ ಸಿದ್ಧಾಂತವನ್ನು ವಿವರಿಸಲು ಅತ್ಯುತ್ತಮ ಎಂದು ಭಾವಿಸಿದ್ದರು. ಆದರೆ, ಈ ಸಿದ್ಧಾಂತ ಪ್ರಯೋಗಗಳಲ್ಲಿ ವಿಫಲವಾಗಿತ್ತು.

ಐನ್‌ಸ್ಟೀನ್, ಎಡ್ಡಿಂಗನ್ಸ್ಟ್ ಹಾಗೂ ಹಾಕಿಂಗ್ ಅವರಿಂದಲೇ ಬಗೆಹರಿಸಲು ಸಾಧ್ಯವಾಗದ ಸಮಸ್ಯೆ ನಮ್ಮಿಂದಾದೀತೇ? ಎಂದು ಯುವ ವಿಜ್ಞಾನಿಗಳು ಅಚ್ಚರಿ ಪಟ್ಟರೂ ಆಶ್ಚರ್ಯವೇನಿಲ್ಲ. ಹೀಗಾಗಿ ಈಗಿನ ಪೀಳಿಗೆಯ ವಿಜ್ಞಾನಿಗಳು ಎಲ್ಲದರ ಸಿದ್ಧಾಂತದಂತಹ ಮೇರು ಪರ್ವತ ಏರುವ ಬದಲು, ಕ್ವಾಂಟಂ ಗುರುತ್ವಾಕರ್ಷಣದಂತಹ ಪರ್ಯಾಯಗಳ ಕಡೆ ಗಮನ ಹರಿಸುತ್ತಿದ್ದಾರೆ.

ಇಷ್ಟೆಲ್ಲ ಸವಾಲುಗಳಿದ್ದರೂ, ಹಲವು ಹಿರಿಯ ಭೌತಶಾಸ್ತ್ರಜ್ಞರು ಈ ಕಡೆ ಗಮನ ಹರಿಸುತ್ತಿದ್ದಾರೆ. ಫ್ರಾನ್ಸಿಸ್ ಕ್ರಿಕ್ ಅವರು ಹಲವು ವರ್ಷಗಳಿಂದ ಈ ದಿಸೆಯಲ್ಲಿ ಪ್ರಯತ್ನ ನಡೆಸುತ್ತಿದ್ದಾರಾದರೂ, ಯಶಸ್ಸು ದೊರೆಯುತ್ತಿಲ್ಲ.

ಈಗಾಗಲೇ ಮಹಾನ್ ಸಾಧನೆ ಮಾಡಿರುವವರು, ಇನ್ನು ಕಳೆದುಕೊಳ್ಳುವುದೇನೂ ಇಲ್ಲ ಎಂಬ ನಿರ್ಧಾರಕ್ಕೆ ಬಂದ ನಂತರ, ಎಲ್ಲದರ ಸಿದ್ಧಾಂತದ ಕಡೆ ಗಮನ ಹರಿಸಬಹುದಾಗಿದೆ.

ವಿಶ್ವದ ಪರಮೋಚ್ಛ ಸವಾಲಿಗೆ ವೈಫಲ್ಯದ ಹೆದರಿಕೆಯೇ ಪೆಡಂಭೂತವಾಗಿದೆ. ಶೈಕ್ಷಣಿಕ ಸ್ವರೂಪ ಹಾಗೂ ಸಂಶೋಧನಾ ಚೌಕಟ್ಟು ಈ ದಿಸೆಯಲ್ಲಿ ಪೂರಕವಾಗಿಲ್ಲ. ಪ್ರಯತ್ನಿಸಿ ವಿಫಲರಾದವರನ್ನು ಇತಿಹಾಸ ಕಡೆಗಣಿಸುತ್ತಿದೆ. ಇಷ್ಟಾದರೂ, ಅಪಾಯ ಎದುರಿಸಲು ಸಿದ್ಧವಾಗಿರುವವರಿಂದಲೇ ಪ್ರಗತಿ ಸಾಧ್ಯ ಎಂಬುದನ್ನು ಮರೆಯಲಾಗದು ಎಂದು ಸಂಶೋಧಕ ಸ್ಯಾಮ್ ಮೆಕೀ ಹೇಳುತ್ತಾರೆ.

# ಜಿಲ್ಲಾ ಪೊಲೀಸ್ ವತಿಯಿಂದ ನಿವೃತ್ತ ಅಧಿಕಾರಿಗಳಿಗೆ ಬೀಳ್ಕೊಡುಗೆ



ದಾವಣಗೆರೆ, ಜೂ 3 - ಪೊಲೀಸ್ ಇಲಾಖೆಗೆ ನೇಮಕ ಹೊಂದಿ ಸುದೀರ್ಘ ಸೇವೆ ಸಲ್ಲಿಸಿ, ವಯೋ ನಿವೃತ್ತಿ ಹೊಂದಿದ ಅಧಿಕಾರಿಗಳಿಗೆ ಜಿಲ್ಲಾ ಎಸ್ಪಿ ಉಮಾ ಪ್ರಶಾಂತ್ ಅಭಿನಂದಿಸಿ, ಬೀಳ್ಕೊಟ್ಟರು.

ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂಜನಪ್ಪ, ಜಿಲ್ಲಾ ಸಶಸ್ತ್ರ ಮೀಸಲು ಪಡೆಯಲ್ಲಿ ಎ.ಆರ್.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಿ.ವಿ.ನಾಗರಾಜ, ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಧರ್ಮಪ್ಪ ಅವರನ್ನು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಶುಕ್ರವಾರ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅವರು ನಿವೃತ್ತಿ ಜೀವನಕ್ಕೆ ಶುಭ ಕೋರಿ ಸನ್ಮಾನಿಸಿದರು.

ಜಿಲ್ಲಾ ಪೊಲೀಸ್ ವತಿಯಿಂದ ಅಭಿನಂದಿಸಿ, ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಕಛೇರಿಯ ಸಹಾಯಕ ಆಡಳಿತಾಧಿಕಾರಿ ಮೆಹಬೂಬ್ ಹಾಗೂ ನಿವೃತ್ತರಾದವರ ಕುಟುಂಬ ವರ್ಗದವರು ಉಪಸ್ಥಿತರಿದ್ದರು.

# 'ದಿನಕ್ಕೊಂದು ವಚನ ಕಲಿಸಿ' ಜಸ್ಪಿನ್ 'ಡಿ' ಸೌಜಾ ಕರೆ



ದಾವಣಗೆರೆ, ಜೂ. 3 - ಮಕ್ಕಳಿಗೆ ಪ್ರತಿನಿತ್ಯ 12ನೇ ಶತಮಾನದ ಬಸವೇಶ್ವರರ ಹಾಗೂ ಇನ್ನಿತರೆ ಶರಣ, ಶರಣೆಯರ ಒಂದೊಂದು ವಚನಗಳನ್ನು ತಿಳಿಸಿಕೊಟ್ಟರೆ, ಮುಂದೆ ಅವರ ಜೀವನ ಸುಲಭವಾಗುತ್ತದೆ ಎಂದು ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಪಿನ್ 'ಡಿ' ಸೌಜಾ ಅವರು ಕರೆ ನೀಡಿದರು.

ನಗರದ ಹಾಲಕೆರೆ ಶ್ರೀ ಅನ್ನದಾನೇಶ್ವರ ಶಾಖಾ ಮಠದಲ್ಲಿ ಮೊನ್ನೆ ಏರ್ಪಡಿಸಿದ್ದ 269ನೇ ಶಿವಾನುಭವ ಸಂಪದ, ಶ್ರೀ ಬಸವೇಶ್ವರ ಜಯಂತಿ ಹಾಗೂ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮನಸ್ಸಿನ ತಳಮಳ, ಕ್ರೌರ್ಯ ದೂರವಾಗುತ್ತದೆ ಎಂದರು.

ಕೋವಿಡ್ ನಂತರ ಮಕ್ಕಳ ಜೀವನ ಶೈಲಿಯೇ ಬದಲಾಗಿದೆ, ಗುರು-ಹಿರಿಯರಲ್ಲಿ ಭಕ್ತಿ ಇಲ್ಲ, ಪೋಷಕರಿಗೆ ಮಕ್ಕಳು ಬೆಲೆ ಕೊಡ್ತಾ ಇಲ್ಲ, ಪೋಷಕರು ಮತ್ತು ಮಕ್ಕಳು ಮೊಬೈಲ್ ದಾಸರಾಗಿದ್ದಾರೆ, ಬಂಧು-ಬಳಗದ ಸಂಪರ್ಕದಿಂದ ದೂರವಿರುತ್ತಾರೆ, ಪರಿಸ್ಥಿತಿ ಹೀಗೇ ಮುಂದುವರೆದರೆ ಪೋಷಕರು ದೊಡ್ಡ ದುರಂತವನ್ನು ಅನುಭವಿಸುತ್ತಾರೆ, ಈಗಲೇ ಎಚ್ಚೆತ್ತುಕೊಳ್ಳುವುದು ಅವಶ್ಯಕವೆಂದರು.

ಸಮಾಜದಲ್ಲಿ ಮಹಿಳೆಯರ ಪಾತ್ರ ಮುಖ್ಯ. ಆದರೆ ಇತ್ತೀಚೆಗೆ ಆಮಿಷಕ್ಕೆ ಒಳಗಾಗಿ ಪತಿ-ಪತ್ನಿಯರಲ್ಲಿ ಸೌಹಾರ್ದತೆ ಇಲ್ಲ. ಅತ್ತೆ, ಅಜ್ಜಿ, ಅಕ್ಕ-ತಂಗಿಯರು ಹೊಣೆಗಾರಿಕೆಯನ್ನು ಅರಿತುಕೊಳ್ಳಬೇಕೆಂದರು.

ನಮ್ಮ ದೇಶದ ಸಂಸ್ಕೃತಿ ದಿನದಿಂದ ದಿನಕ್ಕೆ ಕುಸಿಯುತ್ತಿದೆ, ಜನನಿಯರು ಮನೆಗೆ ಮೊದಲ ಗುರುವಾಗಿ, ಮಕ್ಕಳಿಗೆ ಸಂಸ್ಕಾರದ ಬೀಜ ಬಿತ್ತುವುದರ ಮೂಲಕ ಒಳ್ಳೆಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕು ಎಂದು ನಿವೃತ್ತ ಗ್ರಂಥ ಪಾಲಕಿ ಶ್ರೀಮತಿ ನಾಗರತ್ನ ಹೊಸಮನಿ ಕರೆ ನೀಡಿದರು.

ಮಹಿಳೆಯರು ಮೊಬೈಲ್ ಬಿಟ್ಟು ಓದುವ ಛಲವನ್ನು ಬೆಳೆಸಿಕೊಳ್ಳಬೇಕು, ಮನೆ ಕೆಲಸದ ಕಾಯಕದಲ್ಲಿ ತೊಡಗಿ ದೇಶದ ಮತ್ತು ಕುಟುಂಬದ ಶಾಂತತೆಯನ್ನು ಕಾಪಾಡಬೇಕೆಂದು ನಿವೃತ್ತ ಶಿಕ್ಷಕಿ ಶ್ರೀಮತಿ ಸುನಂದ ಜಂಬನ ಗೌಡ್ರು ನುಡಿದರು.

12ನೇ ಶತಮಾನದಲ್ಲಿ ಬಸವಣ್ಣನವರು ಸಂವಿಧಾನ ರೂಪಿಸಿದವರು. ಅವರ ವಚನಗಳನ್ನು ಅರಗಿಸಿಕೊಳ್ಳುವುದು ಬಹಳ ಕಷ್ಟ. ಮಹಾತ್ಮರನ್ನು ನೆನೆಯುವುದರಿಂದ ಜೀವನ ಸುಂದರ, ಸುಖಮಯವಾಗಿರುತ್ತದೆ, ಬಿದ್ದವರನ್ನು ಮೇಲೆತ್ತುವುದು ಬಸವಣ್ಣನವರ ಕಾಯಕವಾಗಿತ್ತು ಎಂದು ಸೋಮ ಸಮುದ್ರದ ಶ್ರೀ ಕೊಟ್ಟೂರು ಸ್ವಾಮಿ ಮಠದ ಶ್ರೀ ಸಿದ್ಧಲಿಂಗ ದೇವರು ಆಶೀರ್ವಚನದಲ್ಲಿ ನುಡಿದರು.

ಅಕ್ಕನ ಬಳಗದ ಅಧ್ಯಕ್ಷ ಶ್ರೀಮತಿ ಮಂಗಳ ವೀರಪ್ಪ ಬಾವಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಂಚಾಕ್ಷರಿ ಸಂಗೀತ ವಿದ್ಯಾಲಯದ ಟಿ.ಹೆಚ್.ಎಂ. ಶಿವಕುಮಾರ ಸ್ವಾಮಿ ಪ್ರಾರ್ಥಿಸಿದರು. ನಂತರ ನಿವೃತ್ತ ಶಿಕ್ಷಕ ಮಹಾ ರುದ್ರಪ್ಪ ಮೆಣಸಿನಕಾಯಿ ಸ್ವಾಗತಿಸಿದರು. ಶ್ರೀ ಸಿದ್ದಗಂಗಾ ವಿದ್ಯಾ ಸಂಸ್ಥೆಯ ಸಹ ಶಿಕ್ಷಕಿ ಶ್ರೀಮತಿ ತನುಜ ವಿ.ಬಿ. ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಶ್ರೀಮತಿ ಸುಜಾತ ವಂದಿಸಿದರು. ಶ್ರೀಮತಿ ಸಂಗಮ್ಮ ಅಡಿವೆಪ್ಪ, ಶ್ರೀಮತಿ ನೀಲಮ್ಮ ಮಾಂತೇಶ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ವಚನ ಸಾಹಿತ್ಯ ಸವೆಯಲಾರದ ಅಮೃತ



**ಮಾಯಕೊಂಡದ ಓಬಣ್ಣನಹಳ್ಳಿಯ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವರಾಜ ದೇವರು**

ಮಾಯಕೊಂಡ, ಜೂ.3- ವಚನ ಸಾಹಿತ್ಯ ಸವೆಯದ ಅಮೃತವಾಗಿದ್ದು, ಇದರ ಅಧ್ಯಯನದಿಂದ ಬದುಕು ಸಮೃದ್ದವಾಗುತ್ತದೆ ಎಂದು ಖ್ಯಾತ ಬಸವ ತತ್ವ ಪ್ರಚಾರಕರಾದ ಸವದತ್ತಿ ಬಸವಾಶ್ರಮದ ಬಸವರಾಜ ದೇವರು ಕರೆ ನೀಡಿದರು.

ಶರಣ ಸಾಹಿತ್ಯ ಪರಿಷತ್ತು ಮತ್ತು ಬಸವ ಕಲಾಲೋಕ ಸೋಮವಾರ ಓಬಣ್ಣನಹಳ್ಳಿಯಲ್ಲಿ ಹಮ್ಮಿಕೊಂಡ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲಿಂಗದ ಮೂಲಕ ಸ್ವಾನುಭಾವ, ವಚನದ ಮೂಲಕ ಅನುಭಾವದ ಸಾಹಿತ್ಯ ನೀಡಿದವರು ಬಸವಣ್ಣ. ಹನ್ನೆರಡನೇ ಶತಮಾನದಿಂದ ಇಂದಿಗೂ ಪ್ರಸ್ತುತವಿರುವ ವಚನ ಸಾಹಿತ್ಯ ಸವೆಯಲಾರದ ಅಮೃತ. ಶರಣರು ಕಲ್ಯಾಣ ಕ್ರಾಂತಿಯ ವೇಳೆ ತಮ್ಮ ಮಕ್ಕಳನ್ನು ಕೈಬಿಟ್ಟು, ವಚನ ಸಾಹಿತ್ಯ ಪುಸ್ತಕ ಹೊತ್ತೊಯ್ದು ರಕ್ಷಿಸಿದರು.

ವಚನ ಸಾಹಿತ್ಯ ಸುಮಾರು 780 ವರ್ಷ ಅಜ್ಞಾತವಾಸ ಅನುಭವಿಸಿತು. ಫ. ಗು. ಹಳಕಟ್ಟಿಯವರ ಶ್ರಮದಿಂದ ವಚನ ಸಾಹಿತ್ಯ ಪುನರುತ್ಥಾನವಾಯಿತು. ಪ್ರಶ್ನಿಸುವವರಿಗಾಗಿಯೇ ಹುಟ್ಟಿದ ಏಕೈಕ ವೇದಿಕೆ ಅನುಭವ ಮಂಟಪ. ಶರಣ ಸಾಹಿತ್ಯ ಓದಿ, ಮಕ್ಕಳಿಗೆ ಕಲಿಸಿ, ಸಂಸ್ಕಾರ ನೀಡುವ ಕೆಲಸ ಮಹಿಳೆಯರಿಂದ ಸಾಧ್ಯ. ಇಂದು ಸಂಸ್ಕಾರದ ಸಂಪರ್ಕದ ಕೊಂಡಿ ಕಳಚಿದೆ. ಮರು ಬೆಸೆಯುವ ಯತ್ನ ನಡೆಯಬೇಕಿದೆ ಎಂದರು.

ಸಂಸ್ಕೃತ ಸಾಹಿತ್ಯಕ್ಕೆ ಜೋಡಿಸಿದರೆ, ವಚನ ಸಾಹಿತ್ಯ ಸುಲಿದ ಬಾಳೆ ಹಣ್ಣಿನಂತೆ ಸುಲಭವಾದದ್ದು. ಶರಣ ಸಾಹಿತ್ಯದಲ್ಲಿ ಜೀವನಾನುಭವ, ಬದುಕಿನ ಸಾರ್ಥಕತೆಯ ಸಾರ ಹೊಂದಿದೆ. ಸುವ್ಯವಸ್ಥಿತ ಸಮಾಜ ನಿರ್ಮಾಣಕ್ಕಾಗಿ ಲಿಂಗಾಯತರಲ್ಲಿ ಉಪ ಪಂಗಡಗಳು ಹುಟ್ಟಿವಿಯೇ ಹೊರತು, ಬೇರೆ ಯಾವ ಉದ್ದೇಶದಿಂದಲ್ಲ. ಉಪ ಪಂಗಡಗಳ ಮಧ್ಯೆ ಭೇದ ಸಲ್ಲದು ಎಂದರು.

ದೇವರು - ಭಕ್ತರ ನಡುವೆ ಇದ್ದ ಬ್ರಾಹ್ಮಣಿಕೆ ವ್ಯವಸ್ಥೆಯಿಂದ ಆಗುತ್ತಿದ್ದ ಅನ್ಯಾಯ ತಡೆಯಲು ಇಷ್ಟಲಿಂಗದ ಕಲ್ಪನೆ ನೀಡಿದರು. ಕಾಯಕ ದಾಸೋಹ ತಂದ ಜಗತ್ತಿನ ಏಕೈಕ ಪ್ರವಾದಿ ಬಸವಣ್ಣನವರು. ವಚನ ಸಾಹಿತ್ಯ ಅಧ್ಯಯನದಿಂದ ಬದುಕು ಸಮೃದ್ಧವಾಗುತ್ತದೆ.

ಲಿಂಗಾಯತರು ಬಹುವರ್ಷ ವಚನ ಸಾಹಿತ್ಯ ಅಧ್ಯಯನ ಮಾಡದೇ, ಪುಸ್ತಕ ಪೂಜೆ ಮಾಡಿದರು.

ಇತ್ತೀಚಿನ ವರ್ಷಗಳಲ್ಲಿ ಅವು ಬಹುಪ್ರಾಮುಖ್ಯತೆ ಪಡೆದ ಅಧ್ಯಯನ ವಿಷಯವಾಗಿದೆ ಎಂದು ಬಣ್ಣಿಸಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹೊನ್ನಾನಾಯ್ಕನಹಳ್ಳಿ ಮುರುಗೇಶಪ್ಪ ಬಸವಣ್ಣ ಅವರದು. ಕಲ್ಮಷವಿಲ್ಲದ ಜೀವನ. ಬಸವಾದಿ ಶರಣರು ವಚನ ಸಾಹಿತ್ಯ ಬರೆಯದಿದ್ದರೆ, ನಾವೆಲ್ಲಾ ಫಲವಿಲ್ಲದ ಮರವಾಗುತ್ತಿದ್ದೆವು. ಶರಣರು ನುಡಿದಂತೆ ನಡೆದು ಸಾಧನೆ ಮಾಡಿದವರು. ಬಸವಣ್ಣನ ಆದರ್ಶ ಪಾಲಿಸಿದರೆ ಎಂದೂ ಕೇಡಾಗುವುದಿಲ್ಲ. ಎಲ್ಲಾ ಶರಣರ ಬದುಕನ್ನು ನಾವು ಅರಿಯಬೇಕು. ಓಬಣ್ಣನಹಳ್ಳಿಯಲ್ಲಿ ಬಸವ ಮಂಟಪ ನಿರ್ಮಿಸಿರುವುದು ಅತ್ಯಂತ ಹೆಮ್ಮೆಯ ಸಂಭ್ರಮದ ಸಂಗತಿ ಎಂದರು.

ಬಸವ ಬಳಗದ ಅಧ್ಯಕ್ಷ ಹುಚ್ಚಪ್ಪ ಮಾಸ್ತರ್, ಬಸವ ಜಯಂತಿಯನ್ನು 1913ರಲ್ಲಿ ಹರ್ಡೇಕರ್ ಮಂಜಪ್ಪ ಆರಂಭಿಸಿದ್ದು, ಇಂದು ಹೆಮ್ಮರವಾಗಿದೆ. ಶರಣರು ಪ್ರತೀ ಮನುಷ್ಯನಲ್ಲಿ ದೇವರನ್ನು ಕಂಡವರು. ಮೂಢನಂಬಿಕೆ ಖಂಡತುಂಡವಾಗಿ ವಿರೋಧಿಸಿದವರು. ಶರಣರ ಆದರ್ಶ ಪಾಲಿಸಿ ಸಮೃದ್ದ ನಾಡು ಕಟ್ಟಬೇಕು ಎಂದರು.

ಬಸವ ಕಲಾಲೋಕದಿಂದ ವಚನ ಗಾಯನ ನಡೆಯಿತು. ಚಿನ್ನಸಮುದ್ರ ಉಮೇಶ್ ನಾಯ್ಕ ಜಾನಪದ ಗೀತೆ ಹಾಡಿ ರಂಜಿಸಿದರು. ಓಬಣ್ಣನಹಳ್ಳಿ ಪ್ರಕಾಶ್ ನಿರೂಪಿಸಿ, ವಂದಿಸಿದರು.

ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಗೋಪನಾಳ್ ರುದ್ರನಗೌಡ, ಜಿಲ್ಲಾ ಘಟಕ ಅಧ್ಯಕ್ಷ ಪರಮೇಶ್ವರಪ್ಪ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಸಿರಿಗೆರೆ ಪರಮೇಶ್ವರಪ್ಪ, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಅಧ್ಯಕ್ಷ ಆವರಗೆರೆ ರುದ್ರಮುನಿ, ರಾಜ್ಯ ಸಮಿತಿ ಸದಸ್ಯ ಮಹಾಂತೇಶ್ ಅಂಗಡಿ ಮತ್ತಿತರರಿದ್ದರು.

# ಜಿಲ್ಲಾಧಿಕಾರಿಗಳ ಮೇಲೆ ಪ್ರಭಾವದ ಆರೋಪ : ಸಾಕ್ಷಿಗೆ ಹೆಚ್ಚು ಸಮಯಕ್ಕೆ ನಕಾರ

ನವದೆಹಲಿ ಜೂ. 3 – ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು 150 ಜಿಲ್ಲಾಧಿಕಾರಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದರು ಎಂಬ ಆರೋಪದ ಬಗ್ಗೆ ಸಾಕ್ಷಿ ಒದಗಿಸಲು ಹೆಚ್ಚಿನ ಸಮಯ ನೀಡಬೇಕು ಎಂಬ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರ ಮನವಿಯನ್ನು ಚುನಾವಣಾ ಆಯೋಗ ತಳ್ಳಿಹಾಕಿದೆ.

ಜೂನ್ 4ರಂದು ಮತ ಎಣಿಕೆ ಆರಂಭವಾಗುವ ಮುಂಚೆ ಆರೋಪದ ಬಗ್ಗೆ ಸಾಕ್ಷಿ ಒದಗಿಸುವಂತೆ ಚುನಾವಣಾ ಆಯೋಗ ತಿಳಿಸಿತ್ತು.

ಆದರೆ, ಈ ಆರೋಪದ ಬಗ್ಗೆ ಮಾಹಿತಿ ನೀಡಲು ಇನ್ನೂ ಒಂದು ವಾರ ಸಮಯ ನೀಡಬೇಕು ಎಂದು ರಮೇಶ್ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು.

ಈ ಬೇಡಿಕೆಯನ್ನು ತಳ್ಳಿ ಹಾಕಿರುವ ಚುನಾವಣಾ ಆಯೋಗ, ಜೂನ್ 3ರ ಸಂಜೆ 7 ಗಂಟೆಯ ಒಳಗೆ ಆರೋಪದ ಬಗ್ಗೆ ಮಾಹಿತಿ ನೀಡಬೇಕು. ಇಲ್ಲವಾದರೆ ಈ ವಿಷಯದಲ್ಲಿ ಹೇಳುವುದೇನೂ ಇಲ್ಲ ಎಂದು ಭಾವಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

ತಮ್ಮ ಮೇಲೆ ಅನಗತ್ಯ ಪ್ರಭಾವ ಬೀರುವ ಯತ್ನ ನಡೆದಿದೆ ಎಂದು ಯಾವುದೇ ಜಿಲ್ಲಾಧಿಕಾರಿ ವರದಿ ನೀಡಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ.

# ಜಗಳೂರು ತಾಲ್ಲೂಕು ಬಿದರಕೆರೆ ಗ್ರಾಮದಲ್ಲಿ ಪರಿಹಾರಕ್ಕಾಗಿ ಆಗ್ರಹಿಸಿ ವಿಂಡ್ ಫ್ಯಾನ್ ಸಂಪರ್ಕ ಸ್ಥಗಿತಗೊಳಿಸಿ ಪ್ರತಿಭಟನೆ

ಜಗಳೂರು, ಜೂ. 3 - ತಾಲ್ಲೂಕಿನ ಬಿದರಕೆರೆ ಗ್ರಾಮದ ಜಮೀನಿನಲ್ಲಿ ಪರಿಹಾರಕ್ಕೆ ಆಗ್ರಹಿಸಿ ಹರಿಯಾಣ ಮೂಲದ ಖಾಸಗಿ ರಿನಿವ್ಯೋ ವಿಂಡ್ ಫ್ಯಾನ್ ಕಂಪನಿ ವಿರುದ್ಧ ಫ್ಯಾನ್ ವಿದ್ಯುತ್ ಲೈನ್ ಸಂಪರ್ಕ ಸ್ಥಗಿತಗೊಳಿಸಿ ಕರ್ನಾಟಕ ರೈತ ಸೇನೆಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಹಾಗೂ ಜಮೀನಿನ ಮಾಲೀಕ ಉಜ್ಜನಗೌಡ್ರು ಮಾತನಾಡಿ, ನಮ್ಮ ಸ್ವಂತಕ್ಕೆ ಸೇರಿದ ಸರ್ವೆ ನಂಬರ್ 60/4 ಜಮೀನಿನಲ್ಲಿ ರಿನಿವ್ಯೂ ವಿಂಡ್ ಫ್ಯಾನ್ ಕಂಪನಿ ಕಳೆದ ಮೂರು ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ದೌರ್ಜನ್ಯದಿಂದ ವಿಂಡ್ ಫ್ಯಾನ್ ನ ಹೈಟೆನ್ಷನ್ ವಿದ್ಯುತ್ ಸಂಪರ್ಕದ ಲೈನ್ ಎಳೆದಿದ್ದು. ನಮ್ಮ ಜಮೀನಿನಲ್ಲಿ ಎಳೆಯದಂತೆ ತಡೆಯೊಡ್ಡಿದ ಸಂದರ್ಭದಲ್ಲಿ ಮಾರುಕಟ್ಟೆ ಬೆಲೆಯನ್ವಯ 60 ಲಕ್ಷ ಪರಿಹಾರ ಭರಿಸಲು ಭರವಸೆ ನೀಡಿದ್ದರು. ಇದುವರೆಗೂ ಯಾವುದೇ ಹಣ ನೀಡದೇ ವಂಚಿಸಿ ಪರಿಹಾರ ನೀಡಿದ್ದೇವೆ ಎಂಬ ಸುಳ್ಳು ಆರೋಪ ಮಾಡುತ್ತಿದ್ದಾರೆ. ಪಕ್ಕದ ಜಮೀನಿನ ರೈತರಿಗೆ ನಮ್ಮ ಜಮೀನಿನ್ನು ಕೃಷಿಯೇತರ ಚಟುವಟಿಕೆಗೆ (ಎನ್ ಎ) ಅನುಮತಿಗೆ ಅರ್ಜಿ ಸಲ್ಲಿಸಿದ್ದು. ಸೌತೆ ಕಂಪನಿ ತೆರೆದು ಸುತ್ತಮುತ್ತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಉದ್ದೇಶ ಹೊಂದಲಾಗಿದೆ. ಫ್ಯಾನ್ ನ ವಿದ್ಯುತ್ ಸಂಪರ್ಕದ ಲೈನ್ ಅಡ್ಡಿಯಾಗಿದೆ. ಶೀಘ್ರ ಬೇಡಿಕೆ ಈಡೇರಿಸದಿದ್ದರೆ ಲೈನ್ ಕಿತ್ತು ಹಾಕಲಾಗುವುದು ಎಂದು ಎಚ್ಚರಿಸಿದರು.



ಈ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಮೆಳ್ಳೇಕಟ್ಟೆ ಪದ್ಮ, ನೆಲಹೊನ್ನಿ ರಮೇಶ್, ಅನಿತಮ್ಮ, ಭಾಗ್ಯಮ್ಮ, ಮಂಜುನಾಥ್, ಗೀತಮ್ಮ, ಚೌಡಮ್ಮ ಮುಖಂಡರಾದ ಬಸವರಾಜ್, ಚಂದ್ರಣ್ಣ ಭಾಗವಹಿಸಿದ್ದರು.

**ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಧೀಶರವರ ನ್ಯಾಯಾಲಯ, ದಾವಣಗೆರೆ**

**ಎಫ್.ಡಿ.ಪಿ ಸಂಖ್ಯೆ 21/2019**

**ಅರ್ಜಿದಾರರು :** ಕುಮಾರಿ ಚಂದ್ರಿಕ ಎಸ್.ಬಿ ಮತ್ತು ಇನ್ನೊಬ್ಬರು - ವಿರುದ್ಧ

**ಎದುರುದಾರರು :** ಶ್ರೀ ರಾಜು ಮತ್ತು ಇತರರು.

6(ಬಿ) (ii) ಅಂಶಿಕಾ.ಬಿ.ಜಿ ಬಿನ್ ಡಾ. ಬಿ.ಜಿ.ಪ್ರಭು ಅಪ್ರಾಪ್ತರು, ಇವರ ಪರವಾಗಿ ಗಾರ್ಡಿಯನ್ ಡಾ.ಬಿ.ಜಿ. ಪ್ರಭು ಬಿನ್ ಲೇಟ್ ಗೌಡ್ರ ಶಂಕ್ರಪ್ಪ, ವಾಸ : # 2998/1, 1ಎ2, 2ಎ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

**ಆದೇಶ 5 ನಿಯಮ 20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ ಪ್ರಸ್ತಾಪಿತ 6(ಬಿ) (ii)ನೇ ಎದುರುದಾರರಿಗೆ ನೋಟಿಸ್**

ಈ ಮೇಲ್ಕಂಡ ಅರ್ಜಿಯನ್ನು ಎದುರುದಾರರ ವಿರುದ್ಧ ಅಂತಿಮ ಡಿಕ್ರಿ ಆದೇಶ ಪಡೆಯಲು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ನಿಮ್ಮನ್ನು ಪಕ್ಷಗಾರರನ್ನಾಗಿ ಮಾಡಲು ಅರ್ಜಿ ಸಲ್ಲಿಸಿದ್ದು, ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ 25.06.2024 ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11:00 ಘಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು. ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 31-5-2024ರಂದು ನೀಡಲಾಗಿದೆ.

**(ಎ.ಎಂ.ಹೆಗಡೆ)** ಅರ್ಜಿದಾರರ ಪರ ವಕೀಲರು

ನ್ಯಾಯಾಲಯದ ಆದೇಶದ ಮೇರೆಗೆ

**ಶಿರಸ್ತೇದಾರರು**

ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.


ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ, www.hindusmatrimony.com
SGM Tours
ಎಸ್‌ಜಿಎಂ ಟೂರ್ಸ್
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
ಚಾರ್‌ಧಾಮ್ ವಿಶೇಷ ಯಾತ್ರೆ SEPT OCT
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ*)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
JULY ಕಾಶಿ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
ದೋಧಾಮ್ ವಿಶೇಷ ಯಾತ್ರೆ OCT
ಸಂದರ್ಶಿಸುವ ಸ್ಥಳಗಳು : ಕೇದಾರ್‌ನಾಥ್, ಬದರಿನಾಥ್
AUG ರಾಮೇಶ್ವರಂ ಯಾತ್ರೆ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ. 78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

# ಮೋಟಾರ್ ಬಳಕೆಯಿಂದ ಹಲವೆಡೆ ನೀರು ಸ್ಥಗಿತ

## ಹರಿಹರ : ಸಮರ್ಪಕ ನೀರು ಪೂರೈಸಿ, ಇಲ್ಲದಿದ್ದಲ್ಲಿ ಕಂದಾಯ ಭರಿಸಲ್ಲ

**ಎಂ. ಚಿದಾನಂದ ಕಂಚಿಕೇರಿ**



ಹರಿಹರ ಬೆಂಕಿನಗರ ಹಾಗೂ ಇಂದ್ರಾನಗರ ಸೇರಿದಂತೆ, ಕೆಲವು ಬಡಾವಣೆಗಳಲ್ಲಿ ಜಲಸಿರಿ ನಲ್ಲಿಗೆ ಮೋಟಾರು ಬಳಕೆ ಮಾಡುತ್ತಿರುವ ಪರಿಣಾಮ ಹಲವು ಮನೆಗಳಿಗೆ ನೀರು ತಲುಪದೇ ಇರುವುದರಿಂದ ನಿವಾಸಿಗಳು ತೊಂದರೆ ಪಡುತ್ತಿದ್ದಾರೆ. ನೀರಿನ ತೊಂದರೆ ನೀಗಿಸಲು ಪೌರಾಯುಕ್ತ ಐಗೂರು ಬಸವರಾಜ್ ಮತ್ತು ಜಲಸಿರಿ ಅಧಿಕಾರಿ ನವೀನ್ ಕುಮಾರ್ ಸೇರಿದಂತೆ ಇತರೆ ಅಧಿಕಾರಿಗಳು ಶ್ರಮ ವಹಿಸುತ್ತಿದ್ದಾರೆ.

ಇಂದಿರಾ ನಗರ ಮತ್ತು ಬೆಂಕಿನಗರದ ಎತ್ತರ ಪ್ರದೇಶಗಳಲ್ಲಿ ವಾಸವಿರುವ ಬಹುತೇಕ ಮನೆಗಳಿಗೆ ಸಮರ್ಪಕ ನೀರು ತಲುಪುತ್ತಿಲ್ಲ. ಕಾರಣ ನಲ್ಲಿಗಳಿಗೆ ಮೋಟಾರ್ ಬಳಕೆ ಮಾಡಿ ನೀರು ಶೇಖರಣೆ ಮಾಡುತ್ತಿದ್ದಾರೆ. ಕೆಲವರು ನಲ್ಲಿಗೆ ಮೋಟಾರ್ ಬಳಕೆ ಮಾಡಿ ನೀರು ಸಂಗ್ರಹ ಮಾಡುವುದರಿಂದ ನಮಗೆ ನೀರು ಸಿಗುತ್ತಿಲ್ಲವೆಂದು ಸ್ಥಳೀಯರು, ನಗರಸಭೆ ಮತ್ತು ಜಲಸಿರಿ ಅಧಿಕಾರಿಗಳ ಮೇಲೆ ಆಕ್ರೋಶ ಹೊರಹಾಕುತ್ತಿದ್ದಾರೆ ಮತ್ತು ನೀರಿನ ಕಂದಾಯ ಭರಿಸುವುದಿಲ್ಲ ಎಂಬುದಾಗಿಯೂ ಎಚ್ಚರಿಕೆ ನೀಡುತ್ತಿದ್ದಾರೆ.

ಬಡಾವಣೆಯ ಜನರು ಕೂಲಿ ಕಾರ್ಮಿಕರು ಆಗಿದ್ದರಿಂದ ನೀರು ತುಂಬುವುದಕ್ಕಾಗಿಯೇ ಕೆಲಸಕ್ಕೆ ರಜೆ ಮಾಡುವಂತಾಗಿದ್ದು, ನೀರು ಸಂಗ್ರಹಿಸುವುದೇ ಒಂದು ಕಾಯಕವಾಗಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಇಲ್ಲಿನ ಸಮಸ್ಯೆ ಬಗೆಹರಿಸುವಂತೆ ಇಲ್ಲಿನ ಸ್ಥಳೀಯರು ಆಗ್ರಹಿಸಿದ್ದಾರೆ.

**ಇಂದ್ರಾನಗರ ಮತ್ತು ಬೆಂಕಿನಗರದಲ್ಲಿ ಮೀಟರ್ ನಲ್ಲಿಗೆ ಮೋಟಾರ್ ಬಳಕೆ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದ್ದು, ಸಾರ್ವಜನಿಕರಿಗೆ ಮೋಟಾರ್ ಬಳಕೆ ಮಾಡದಂತೆ ತಿಳಿ ಹೇಳಿದ್ದೇನೆ. ನಿಯಮ ಮೀರಿದ್ದಲ್ಲಿ ಸರ್ಕಾರದ ನಿರ್ದೇಶನದಂತೆ 5 ಸಾವಿರ ರೂ.ಗಳ ದಂಡ ಹಾಕಲಾಗುವುದು.**



**- ಐಗೂರು ಬಸವರಾಜ್,** ಪೌರಾಯುಕ್ತ

**ಜಲಸಿರಿ ಅಧಿಕಾರಿಗಳು, ಬಡಾವಣೆಯ ಎತ್ತರದ ಪ್ರದೇಶದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದರೆ ಸಮಸ್ಯೆ ಬಗೆಹರಿಯಲಿದೆ.**
**ಆದರೆ ಸಮರ್ಪಕ ನೀರು ಪೂರೈಸದೇ ಇದ್ದಲ್ಲಿ, ನಿವಾಸಿಗಳೆಲ್ಲರೂ ನಗರಸಭೆ ಮುಂದೆ ಖಾಲಿ ಕೊಡ ಹಿಡಿದು ಪ್ರತಿಭಟನೆ ಮಾಡಲಿದ್ದೇವೆ.**




**- ಎಂ.ಎಸ್. ಬಾಬುಲಾಲ್,** ನಗರಸಭಾ ಸದಸ್ಯ

ಇಂದ್ರಾನಗರ ಮತ್ತು ಬೆಂಕಿನಗರ ಸೇರಿದಂತೆ ನಾಲ್ಕು ಬಡಾವಣೆಗಳ ಜನರು ನೀರು ಸರಬರಾಜು ನಿಲ್ಲಲಿದೆ ಎಂಬ ಆತಂಕದಿಂದ ಮೋಟಾರ್ ಹಚ್ಚುತ್ತಿದ್ದಾರೆ. ಮನೆಗಳಿಗೆ ಭೇಟಿ ನೀಡಿ ಇನ್ನೂ ಕೆಲವು ದಿನಗಳ ಕಾಲ ನೀರು ಬರಲಿದೆ ಎಂದು ಮೋಟಾರ್ ತೆರವುಗೊಳಿಸಿ ತಿಳಿಹೇಳಿ ಬಂದಿದ್ದೇವೆ.

**- ನವೀನ್ ಕುಮಾರ್,** ಜಲಸಿರಿ ಇಲಾಖೆಯ ಅಧಿಕಾರಿ

# ಶೈಕ್ಷಣಿಕ ರಂಗ ಸಂಪನ್ನ ಡಾ. ಎಂ.ಜಿ. ಈಶ್ವರಪ್ಪ



ನಗುಮೊಗದ, ಸರಳ ಸಜ್ಜನಿಕೆಯ, ಬಹುಮುಖ ವ್ಯಕ್ತಿತ್ವದ ಭಾವನಜೀವಿ ಡಾ. ಎಂ.ಜಿ. ಈಶ್ವರಪ್ಪನವರು. ಶಿವಮೊಗ್ಗ ತಾಲ್ಲೂಕು ಹಾಡೋನಹಳ್ಳಿಯ ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಶ್ರೀಯುತರನ್ನು ನೋಡಿದಗಲೆಲ್ಲಾ ಏನೋ ಒಂದ ಸೆಳೆತ. ಅವರದ್ದು ಅಪ್ಪಟ ಗ್ರಾಮೀಣ ಬದುಕಿನ ಮೌಲ್ಯಗಳನ್ನು ಬಿತ್ತಿ ಬೆಳೆಯುವ ಕ್ರಿಯಶೀಲ ಮನಸ್ಸು. ವಿದ್ಯಾರ್ಥಿ ದೆಸೆಯಲ್ಲೆ ಜಾನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು, ಗ್ರಾಮೀಣ ರಂಗಭೂಮಿ ಸೆಳೆತಕ್ಕೆ ಒಳಗಾದವರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಬೇಲೂರು ರಾಮಮೂರ್ತಿಯವರ 'ಕಸ್ತೂರಿ' ನಾಟಕದಲ್ಲಿ ಮೊದಲ ಬಾರಿಗೆ ಬಣ್ಣ ಹಚ್ಚಿದ್ದರು. ಮುಂದೆ ಪದವಿ ವಿದ್ಯಾರ್ಥಿಗಳಿಗಾಗಿ ಲಂಕೇಶ್ವರ 'ಈಡಿಪಸ್' ನಾಟಕ ನಿರ್ದೇಶನದ ಜೊತೆಗೆ ಟೈರೀಶಿಯನ್ ಪಾತ್ರ ಮಾಡಿ ಎಲ್ಲರ ಮೆಚ್ಚುಗೆ ಪಡೆದರು. ಮೈಸೂರಿನಲ್ಲಿ 'ಸಮತೆಂತೋ' ಹವ್ಯಾಸಿ ತಂಡದ ಒಡನಾಟದಿಂದಾಗಿ ರಂಗಭೂಮಿಯ ಅವರ ಹವ್ಯಾಸ ಮತ್ತಷ್ಟು ಚಿಗುರೊಡೆಯಿತು.

**ಊರೆಲ್ಲ ನೆಂಟರು ಕೇರಿಯಲ್ಲವೂ ಬಳಗ**
**ಧರಣಿಯೇ ಕುಲದೈವವಾಗಿರಲು ಇದರಲ್ಲಿ**
**ಯಾರನ್ನು ಬಿಡಲಿ - ಸರ್ವಜ್ಞ**

ಎಂಬಂತೆ ಎಲ್ಲರನ್ನೂ ಪ್ರೀತಿಸುತ್ತಾ ಸ್ನೇಹ ವಲಯವನ್ನು ಕಟ್ಟಿಕೊಂಡು, ಬದುಕು ತನಗಾಗಿ ಮಾತ್ರವಲ್ಲ, ಸಮಾಜದ ಒಳಿತಿಗಾಗಿ ಎಂದು ಭಾವಿಸಿದವರು ಈಶ್ವರಪ್ಪನವರು. ದಾವಣಗೆರೆ ರಂಗಭೂಮಿ ತವರು ನೆಲೆ. ಇಲ್ಲಿನ ಪ್ರತಿಮಾ ಸಭಾದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಹವ್ಯಾಸಿ ರಂಗಭೂಮಿಯನ್ನು ಗಟ್ಟಿಗೊಳಿಸಿದರು. ಇಲ್ಲಿನ ಡಿಆರ್‌ಎಂ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುವಾಗ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿ ಹವ್ಯಾಸಿ ರಂಗಭೂಮಿಯನ್ನು ಸಮರ್ಥವಾಗಿ ಬಳಸಿಕೊಂಡರು.

1979ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಕೇರಳದ ತ್ರಿಚೂರಿನಲ್ಲಿ ರಾಷ್ಟ್ರಮಟ್ಟದ ಕಾಲೇಜು ಅಧ್ಯಾಪಕರಿಗೆ ನಡೆದ ರಂಗಭೂಮಿ ನಟನೆ, ರಂಗ ನಿರ್ದೇಶನ, ರಂಗವಿನ್ಯಾಸ ಕುರಿತ ಎರಡು ತಿಂಗಳ ಶಿಬಿರದಲ್ಲಿ ತರಬೇತಿ ಹಾಗೂ ಅಲ್ಲಿನ ಕಲಾ ಮಂದಿರದಲ್ಲಿ ಚಂಪಾ ಅವರ 'ಕೊಡೆಗಳು' ನಾಟಕದಲ್ಲಿ ಪಾತ್ರವಹಿಸಿದ್ದರು. ಕರ್ನಾಟಕ ನಾಟಕ ಅಕಾಡೆಮಿಯ ಶಿಷ್ಯ ವೇತನದಿಂದ 1983ರಲ್ಲಿ ರಂಗದಿಗ್ಗಜ ಬಿ.ವಿ. ಕಾರಂತರ ಮಾರ್ಗದರ್ಶನದಲ್ಲಿ ಮಧ್ಯಪ್ರದೇಶದ ಭೂಪಾಲ್‌ನ ಭಾರತ ಭವನ ಮತ್ತು ದೆಹಲಿ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಎರಡು ತಿಂಗಳು ರಂಗಭೂಮಿ ಅಧ್ಯಯನ ಮಾಡಿದರು.

ಪ್ರತಿಮಾ ಸಭಾದೊಂದಿಗೆ ಹೆಗ್ಗೋಡಿನ ನೀನಾಸಂ, ಮೈಸೂರಿನ ರಂಗಾಯಣ, ಬೆಂಗಳೂರಿನ ಕಲಾಕ್ಷೇತ್ರ, ಸಾಣೇಹಳ್ಳಿಯ ಶಿವಸಂಚಾರಗಳ ಸಹಯೋಗದೊಂದಿಗೆ ವಿವಿಧ ನಾಟಕಗಳನ್ನು ಪ್ರದರ್ಶಿಸಿ ಸಮಾಜವನ್ನು ಎಚ್ಚರಿಸುವ, ವೈಚಾರಿಕ ಪ್ರಜ್ಞೆ ಮೂಡಿಸುವ, ಸಾಂಸ್ಕೃತಿಕ ಸಮಾಜವನ್ನು ಕಟ್ಟುವ ಮೂಲಕ ದಾವಣಗೆರೆಯಲ್ಲಿ ಪ್ರಬುದ್ಧ ಪ್ರೇಕ್ಷಕರನ್ನು ನಿರ್ಮಾಣ ಮಾಡಿದ ಕೀರ್ತಿ ಇವರದು. ಬೇಂದ್ರೆಯವರ ಜಾತ್ರೆ, ಸಾಯೋ ಆಟ, ಚಂಪಾ ಅವರ ಅಪ್ಪ, ಟಿಂಗರ ಬುಡ್ಡಣ್ಣ, ಕುಂಟ ಕುಂಟ ಕುರುವತ್ತಿ, ಲಂಕೇಶರ ಸಂಕ್ರಾಂತಿ, ಬೆಳಗೆರೆ ಕೃಷ್ಣಶಾಸ್ತ್ರಿಗಳ ಹಳ್ಳಿಚಿತ್ರ, ಹಳ್ಳಿಮೇಷ್ಟ್ರು, ದೊರೆಸ್ವಾಮಿಯವರ ನಾಗನಕತೆ, ಚದುರಂಗರ ಇಲಿಬೋನು. ಅರುಣ್ ಮಹೋಪಾಧ್ಯಾಯರ ಮಾರೀಚನ ಬಂಧುಗಳು, ಮಾಸೂರ್ ಅವರ ಏನು ಬೇಡಲಿ ನಿನ್ನ ಬಳಿಗೆ ಬಂದು ಮುಂತಾದ ನಾಟಕಗಳಲ್ಲಿ ನಟನೆ, ನಿರ್ದೇಶನ, ಸಂಘಟನೆಗಳ ಮೂಲಕ ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ. ವಿದ್ಯಾರ್ಥಿಗಳಿಗಾಗಿ 'ಮಧ್ಯಮ ವ್ಯಾಯೋಗ' ನಾಟಕವನ್ನು ಮೂಡಲಪಾಯ ಶೈಲಿಯಲ್ಲಿ ನಿರ್ದೇಶನ ಮಾಡಿದ್ದು, ಅವರಿಗೆ ಜಾನಪದ ಬಗೆಗಿನ ಉತ್ಕಟತೆಯನ್ನು ತೋರಿಸುತ್ತದೆ.

ನೀನಾಸಂ ಹೆಗ್ಗೋಡು ಮತ್ತು ಪ್ರತಿಮಾ ಸಭಾದ ಸಂಯುಕ್ತಾಶ್ರಯದಲ್ಲಿ 'ರಂಗಪಂಚಮಿ ಶಿಬಿರ'ವನ್ನು ದಾವಣಗೆರೆಯಲ್ಲಿ ಆಯೋಜಿಸಿ, ಆ ಮೂಲಕ ಪ್ರತಿಮಾ ಸಭಾಕ್ಕೆ ಬರ್ಟೋಲ್ಟ್ ಬ್ರೆಕ್ಟ್‌ರ ಸೆಜುವಾನಿನ ಸಾಧ್ವಿ, ನಗರಸಭಾ ಸದಸ್ಯರಿಗೆ, ಮ್ಯಾಕ್ಸಿಂಗಾರ್ಕಿಯ ತಾಯಿ, ಗ್ರಾಮಸ್ಥರಿಗೆ ಚೋರ ಚರಣದಾಸ, ಮಕ್ಕಳಿಗಾಗಿ ಆಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು ಹಾಗೂ ಹೆಡ್ಡಾಯಣ ನಾಟಕಗಳನ್ನು ಆಯೋಜಿಸಿ ಪ್ರದರ್ಶಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೇ ರಾಜ್ಯದ ವಿವಿದೆಡೆ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ರಂಗ ತರಬೇತಿ ಶಿಬಿರಗಳನ್ನು ಆಯೋಜಿಸಿ ವಿಶೇಷವಾಗಿ ವಿದ್ಯಾರ್ಥಿಗಳಿಗೆ ರಂಗಭೂಮಿಯ ಪರಿಚಯ ಮಾಡಿಸಿದ್ದಾರೆ.

ನಾಡಿನ ಖ್ಯಾತ ರಂಗ ಕರ್ಮಿಗಳಾದ ಆರ್. ನಾಗೇಶ್, ಕಪ್ಪಣ್ಣ, ಸಿಜಿಕೆ ಚಂದ್ರಕುಮಾರ್ ಸಿಂಗ್, ಗುಡ್ಡಣ್ಣ, ಕೆ.ವಿ. ನಾಗರಾಜಮೂರ್ತಿ, ಜೆ. ಲೋಕೇಶ್, ಮೋಹನರಾಂ, ಬಸವಲಿಂಗಯ್ಯ ಮುಂತಾದವರ ಒಡನಾಟದಿಂದಾಗಿ ತಾಮ್ರ ಪತ್ರ, ಟಿಪಿಕಲ್ ಕೈಲಾಸಂ, ರಸಋಷಿ ಕುವೆಂಪು, ಎಲ್ಲಿಂದಲೋ ಬಂದವರು, ಸತ್ತವರ ನೆರಳು, ಅಸ್ಫೋಟ, ಸಂದರ್ಭ, ಒಡಲಾಳ, ಲಕ್ಷಾಪತಿ ರಾಜನ ಕತೆ, ಮುಂತಾದ ನಾಟಕಗಳ ಪ್ರದರ್ಶನವನ್ನು ದಾವಣಗೆರೆಯಲ್ಲಿ ಆಯೋಜಿಸಿ ಇಲ್ಲಿನ ಪ್ರೇಕ್ಷಕರನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸು ಶ್ರೀಯುತರಿಗೆ ಸಲ್ಲುತ್ತದೆ.

ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ, ಮೈಸೂರು ಮತ್ತು ಹಂಪಿ ವಿಶ್ವವಿದ್ಯಾಲಯಗಳ ಸೆನೆಟ್ ಸಿಂಡಿಕೇಟ್ ಸದಸ್ಯರಾಗಿ, ಪ್ರತಿಮಾ ಸಭಾದ ಸಕ್ರಿಯ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ದಶಕಗಳ ಕಾಲ ತಮ್ಮನ್ನು ತಾವು ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ರಂಗಭೂಮಿ ಕುರಿತಂತೆ ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ವಿವಿಧ ಸಂಘ-ಸಂಸ್ಥೆಗಳು ಆಯೋಜಿಸುವ ವಿಚಾರ ಸಂಕಿರಣಗಳಲ್ಲಿ ಪ್ರಬುದ್ಧವಾಗಿ ವಿಚಾರಗಳನ್ನು ಮಂಡಿಸಿದ್ದಾರೆ.

ಮ್ಯಾಸಬೇಡರು, ಬೇಸಾಯ ಪದ್ಧತಿ, ಕೃಷಿ ಜಾನಪದ, ಹುನಗುಂದ ಬಾಬಣ್ಣ ಮೊದಲಾದ ಹದಿನೆಂಟಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿರುವ ಶ್ರೀಯುತರು, ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ತಾಲ್ಲೂಕು ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಶ್ರೀಯುತರ ರಂಗಭೂಮಿ, ನಾಡು-ನುಡಿ, ಸಂಸ್ಕೃತಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಸಲ್ಲಿಸಿದ ಕಾರ್ಯಗಳನ್ನು ಮನ್ನಿಸಿ ಹಲವು ಪ್ರಶಸ್ತಿ-ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ಮಹಲಿಂಗ ರಂಗ ಪ್ರಶಸ್ತಿ, ರಂಗಸಂಸ್ಥಾನ ಜಾನಪದ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಷಿಪ್, ರಾಜ್ಯೋತ್ಸವ ಪ್ರಶಸ್ತಿ ಮುಖ್ಯವಾದವು.

ಪ್ರಸ್ತುತ ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ, ಬಹುಮುಖ ವ್ಯಕ್ತಿತ್ವದ ಮತ್ತು ಜನಪದ ಸಂಸ್ಕೃತಿಯ ನೆಲೆಯಲ್ಲಿರುವ ಶ್ರೀಯುತರ ನಟನೆ, ನಿರ್ದೇಶನ, ಸಂಘಟನೆ, ಸಾಹಿತ್ಯ ಮೊದಲಾದ ರಂಗಚಟುವಟಿಕೆಗಳನ್ನು ಗಮನಿಸಿ ಶ್ರೀ ಶಿವಕುಮಾರ ಕಲಾಸಂಘ ಸಾಣೇಹಳ್ಳಿ ಶ್ರೀ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಪ್ರತಿಷ್ಠಿತ ಶ್ರೀ ಶಿವಕುಮಾರ ಪ್ರಶಸ್ತಿ ನೀಡಿ ಗೌರವಿಸಿದೆ.

ಸಾಂಸ್ಕೃತಿಕ ಕ್ಷೇತ್ರದ ಮೇರು ವ್ಯಕ್ತಿತ್ವದ ಶ್ರೀಯುತರು ಯಾರಿಲ್ಲದ ಊರಿನಲ್ಲಿ ಏಕಾಂತ ನನಗಿರಲಿ ಯಾರಷ್ಟೇ ಹುಡುಕಿದರೂ ಆ ಊರು ಸಿಗದಿರಲಿ ಎಂದು ಭಾರದ ಲೋಕಕ್ಕೆ ತೆರಳಿರುವುದು ಸಾಂಸ್ಕೃತಿಕ ಕ್ಷೇತ್ರಕ್ಕೆ ಬರಸಿಡಿಲು ಬಡಿದಂತಾಗಿದೆ.

**- ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ**
ನಿಕಟಪೂರ್ವ ಜಿಲ್ಲಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ದಾವಣಗೆರೆ.

# ಹರಪನಹಳ್ಳಿ: ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಶೇ.73.14 ರಷ್ಟು ಮತದಾನ



ಹರಪನಹಳ್ಳಿ, ಜೂ.3- ವಿಧಾನ ಪರಿಷತ್ ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ತಾಲ್ಲೂಕಿನಲ್ಲಿ ಶೇ.73.14 ರಷ್ಟು ಮತದಾನದ ದಾಖಲೆಯ ಜತೆಗೆ ಶಾಂತಿಯುತ ಮತದಾನ ನಡೆಯಿತು.

ಪಟ್ಟಣದ ಜ್ಯೂನಿಯರ್ ಕಾಲೇಜಿನಲ್ಲಿ ಮೂರು ಮತಗಟ್ಟೆ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿತ್ತು, ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಮತದಾರರು ಆಗಮಿಸಿ ಮತಗಟ್ಟೆ ಕೇಂದ್ರದಲ್ಲಿ ಸರತಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ತಮ್ಮ ಹಕ್ಕನ್ನು ಚಲಾಯಿಸಿದರು.

ಕಳೆದ ಭಾನುವಾರ ರಾತ್ರಿ ಮಳೆ ಸುರಿದ ಪರಿಣಾಮ ಸೋಮವಾರ ಪಟ್ಟಣದಲ್ಲಿ ತಂಪೆರೆದ ವಾತಾವರಣ ಇತ್ತು, ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೂ ಬಿರುಸಿನಿಂದ ಮತದಾನ ನಡೆಯಿತು.

ತಾಲ್ಲೂಕಿನಲ್ಲಿ ಒಟ್ಟು 3549 ಪದವೀಧರ ಮತದಾರರ ಪೈಕಿ 2596 ಮತದಾರರು ಮಾತ್ರ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಸಂಜೆ 4 ಗಂಟೆಗೆ ಮತಗಟ್ಟೆ ಕೇಂದ್ರದ ಮುಖ್ಯ ಗೇಟನ್ನು ಬಂದ್ ಮಾಡಿದ ಪರಿಣಾಮ ತಡವಾಗಿ ಬಂದ ಮತದಾರರು ವಾಪಸ್ ತೆರಳಿದ ಘಟನೆ ನಡೆಯಿತು.

ಮತಗಟ್ಟೆ ಕೇಂದ್ರಕ್ಕೆ ಉಪವಿಭಾಗಾಧಿಕಾರಿ ಚಿದಾನಂದ, ಗುರುಸ್ವಾಮಿ, ತಹಶೀಲ್ದಾರ್ ಗಿರೀಶ್ ಬಾಬು ಭೇಟಿ ನೀಡಿ ಪರಿಶೀಲಿಸಿದರು.

# ಜಗಳೂರಿನಲ್ಲಿ ಶೇ. 98 ರಷ್ಟು ಶಾಂತಿಯುತ ಮತದಾನ

ಜಗಳೂರು, ಜೂ. 3 - ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ ಮತದಾನ ಶಾಂತಿಯುತವಾಗಿ ನಡೆಯಿತು. ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದ ಮತಗಟ್ಟೆಯಲ್ಲಿ ಬೆಳಿಗ್ಗೆ 8 ಗಂಟೆಯಿಂದ ಆರಂಭವಾದ ಮತದಾನ ಪ್ರಕ್ರಿಯೆ ಸಂಜೆ 4 ಗಂಟೆವರೆಗೂ ಯಾವುದೇ ತೊಂದರೆಗಳಿಲ್ಲದೆ, ಒಟ್ಟು 351 ಮತದಾರರಲ್ಲಿ 344 ಮತದಾರರು ಮತಗಳನ್ನು ಚಲಾಯಿಸಿದ್ದು. 63 ಮಹಿಳೆಯರು, 281 ಪುರುಷರು ಸೇರಿದಂತೆ ಶೇ. 98 ರಷ್ಟು ಮತದಾನವಾಯಿತು.



**ಕಾಂಗ್ರೆಸ್ ಅಭ್ಯರ್ಥಿ ಪತ್ನಿ ಪೂರ್ಣಿಮಾ ಶ್ರೀನಿವಾಸ್ ಭೇಟಿ**

**ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಭೇಟಿ :** ಮತದಾನ ಸ್ಥಳಕ್ಕೆ ಮಾಜಿ ಶಾಸಕಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಪತ್ನಿ ಪೂರ್ಣಿಮಾ ಶ್ರೀನಿವಾಸ್ ಭೇಟಿ ನೀಡಿ, ಮತದಾನ ಪ್ರಕ್ರಿಯೆ ವೀಕ್ಷಿಸಿ ಮತದಾರರಿಗೆ ಅಭಿನಂದನೆ ಸಲ್ಲಿಸಿದರು.

ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ. ಕೀರ್ತಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಬ್ಲಾಕ್ ಕಾಂಗ್ರೆಸ್ ಎಸ್.ಸಿ ಘಟಕದ ಅಧ್ಯಕ್ಷ ಬಿ. ಮಹೇಶ್ವರಪ್ಪ ಸೇರಿದಂತೆ, ಮುಖಂಡರುಗಳು ಕಾಂಗ್ರೆಸ್ ಅಭ್ಯರ್ಥಿಪರ ಮತಯಾಚನೆ ಮಾಡಿದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರಪ್ಪ, ಎಚ್.ಪಿ. ರಾಜೇಶ್, ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್, ಬಿಜೆಪಿ ಅಭ್ಯರ್ಥಿಪರ ಮತದಾರರಿಗೆ ಮತ ಚಲಾಯಿಸಲು ಮನವಿ ಮಾಡಿದರು.

ಶಿಕ್ಷಕರು, ಶಿಕ್ಷಕಿಯರು ಮತದಾನ ಮಾಡಿದರು. ಆಗ್ನೇಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ತು ಚುನಾವಣೆಯಲ್ಲಿ ಪಕ್ಷಗಳ ಜಿದ್ದಾಜಿದ್ದಿ ಮತದಾನ ಪ್ರಕ್ರಿಯೆ ಸಾರ್ವಜನಿಕರಿಗೆ ಕುತೂಹಲ ಮೂಡಿಸಿತು.

# ಚುಕ್ಕಾಣಿ ಯಾರ ಹೆಗಲಿಗೆ ?

**(1ನೇ ಪುಟದಿಂದ)** ಸಾಕ್ಷಿ ಒದಗಿಸುವಂತೆ ಚುನಾವಣಾ ಆಯೋಗ ಸವಾಲು ಹಾಕಿದೆ.

ಇದಕ್ಕೆ ಪ್ರತ್ಯಾರೋಪ ಮಾಡಿರುವ ಬಿಜೆಪಿ, ಪ್ರತಿಪಕ್ಷಗಳು ಚುನಾವಣಾ ಪ್ರಕ್ರಿಯೆಗೆ ಮಸಿ ಬಳಿಯುವ ಪ್ರಯತ್ನ ನಡೆಸಿವೆ. ಮತಎಣಿಕೆಯ ವೇಳೆ ಹಿಂಸಾಚಾರ ಹಾಗೂ ಅಶಾಂತಿ ಉಂಟಾಗುವುದನ್ನು ತಪ್ಪಿಸಲು ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಕಾಂಗ್ರೆಸ್ ಪಕ್ಷ ತನ್ನ ಸಂಘಟನೆಯನ್ನು ಬಲಪಡಿಸಿಕೊಂಡಿದೆಯೇ ಎಂಬುದನ್ನು ಈ ಬಾರಿಯ ಲೋಕಸಭಾ ಚುನಾವಣಾ ಫಲಿತಾಂಶವು ಒರೆಗೆ ಹಚ್ಚಲಿದೆ. 2014ರ ನಂತರ ಕಾಂಗ್ರೆಸ್ ಸಾಕಷ್ಟು ಹಿನ್ನಡೆ ಕಂಡಿದೆ. ಸತತ ಎರಡು ಬಾರಿ ವಿರೋಧ ಪಕ್ಷದ ನಾಯಕ ಸ್ಥಾನವನ್ನೂ ಪಡೆಯಲು ಸಾಧ್ಯವಾಗಿಲ್ಲ. ಹಿಂದಿ ಭಾಷಿಗರ ರಾಜ್ಯಗಳಲ್ಲಿ ಪಕ್ಷ ಸಾಕಷ್ಟು ಹೆಣಗಾಡುತ್ತಿದೆ.

ಚುನಾವಣೆಯಲ್ಲಿ 295 ಸ್ಥಾನ ಗಳಿಸುವ ಮೂಲಕ ಮೋದಿ ಆಡಳಿತಕ್ಕೆ ತೆರೆ ಎಳೆಯುವುದಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಶ್ವಾಸ ಹೊಂದಿದ್ದಾರೆ. ಜನಪ್ರಿಯ ಯೋಜನೆಗಳು ಹಾಗೂ ಸಂವಿಧಾನ ರಕ್ಷಣೆಯ ಪ್ರಚಾರ ಜನರ ಮನ ಗೆದ್ದಿವೆ ಎಂದು ಐ.ಎನ್.ಡಿ.ಐ.ಎ. ನಾಯಕರು ಹೇಳುತ್ತಿದ್ದಾರೆ.

ಮೋದಿ ನೇತೃತ್ವದಲ್ಲಿ ಬಿಜೆಪಿ ಈ ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ, ಜವಾಹರ ಲಾಲ್ ನೆಹರು ನಂತರ ಸತತ ಮೂರನೇ ಬಾರಿ ಗೆಲುವು ಸಾಧಿಸಿದ ಶ್ರೇಯ ಬಿಜೆಪಿಗೆ ಸಿಗಲಿದೆ.

ಎಡಪಕ್ಷಗಳು, ತೃಣಮೂಲ ಕಾಂಗ್ರೆಸ್, ಬಿಜು ಜನತಾ ದಳ, ವೈ.ಎಸ್.ಆರ್. ಕಾಂಗ್ರೆಸ್ ಪಕ್ಷಗಳಿಗೂ ಇದು ಮಹತ್ವದ ಚುನಾವಣೆಯಾಗಿದೆ. ಪಶ್ಚಿಮ ಬಂಗಾಳ, ಒಡಿಶಾ ಹಾಗೂ ಆಂಧ್ರ ಪ್ರದೇಶದ ಭವಿಷ್ಯಗಳ ಮೇಲೂ ಚುನಾವಣೆ ಪರಿಣಾಮ ಬೀರಲಿದೆ.

ದೇಶದ ಪ್ರತಿಯೊಂದು ರಾಜ್ಯದಲ್ಲೂ ಅಸ್ತಿತ್ವ ಕಂಡುಕೊಳ್ಳಲು ಬಿಜೆಪಿ ತೀವ್ರ ಪ್ರಯತ್ನ ನಡೆಸಿದೆ. ವಿಶೇಷವಾಗಿ ದಕ್ಷಿಣದ ರಾಜ್ಯಗಳಲ್ಲಿ ತನ್ನ ಬಲ ಹೆಚ್ಚಿಸಿಕೊಳ್ಳಲು ಪಕ್ಷ ತೀವ್ರ ಪ್ರಯತ್ನ ನಡೆಸಿತ್ತು. ಈ ಪ್ರಯತ್ನ ಫಲ ನೀಡಲಿದೆಯೇ ಎಂಬುದನ್ನೂ ಫಲಿತಾಂಶ ನಿರ್ಧರಿಸಲಿದೆ. ತಮಿಳುನಾಡು ಹಾಗೂ ಕೇರಳಗಳಲ್ಲಿ ಬಿಜೆಪಿ ಖಾತೆ ತೆರೆಯುವಲ್ಲಿ ಯಶಸ್ವಿಯಾದರೆ ಪ್ರತಿಪಕ್ಷಗಳ ಎದುರಿನ ಸವಾಲು ಇನ್ನಷ್ಟು ಹೆಚ್ಚಾಗಲಿದೆ.

ಚುನಾವಣೆಯಲ್ಲಿ ಗೆಲ್ಲುವ ಅತಿಯಾದ ವಿಶ್ವಾಸ ಹೊಂದಿರುವ ಪ್ರಧಾನಿ ಮೋದಿ, ಈಗಾಗಲೇ ಮುಂದಿನ ಸರ್ಕಾರದ ಮೊದಲ 100 ದಿನಗಳ ಕಾರ್ಯಯೋಜನೆಗಳ ಕುರಿತು ಸಭೆಯನ್ನೂ ನಡೆಸಿದ್ದಾರೆ. ಆದರೆ, ಜನತಾ ಜನಾರ್ದನನ ತೀರ್ಮಾನ ಮತಪೆಟ್ಟಿಗೆಯಲ್ಲಿ ಭದ್ರವಾಗಿದೆ. ಅದರ ಗುಟ್ಟು ಮಧ್ಯಾಹ್ನದ ವೇಳೆಗೆ ಹೊರ ಬೀಳಲಿದೆ.

# ಶಿಕ್ಷಕರ ಕ್ಷೇತ್ರ ಶೇ.92.93 ಮತದಾನ



**(1ನೇ ಪುಟದಿಂದ)** ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಹಿ ಹಾಕಲಾಯಿತು.

ನೈರುತ್ಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳು ಸೇರಲಿದ್ದು 4 ಮತಗಟ್ಟೆಗಳಿಂದ 979 ಮತದಾರರ ಪೈಕಿ 859 ಜನರು ಮತ ಚಲಾಯಿಸಿದರು. ಇಲ್ಲಿನ ಮತದಾರರಿಗೆ ಬಲಗೈ ಮಧ್ಯದ ಬೆರಳಿಗೆ ಅಳಿಸಲಾಗದ ಶಾಹಿಯನ್ನು ಹಾಕಲಾಯಿತು.

ನೈರುತ್ಯ ಪದವೀಧರರ ಕ್ಷೇತ್ರವು ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳನ್ನು ಒಳಗೊಂಡಿದ್ದು ಒಟ್ಟು 8 ಮತಗಟ್ಟೆಗಳಿಂದ 6558 ಮತದಾರರಿದ್ದರು. ಈ ಪೈಕಿ 5309 ಮತದಾರರು ಚಲಾಯಿಸಿದರು. ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಹಿ ಹಾಕಲಾಗಿತ್ತು.

ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಡಾ.ವೈ.ಎ ನಾರಾಯಣಸ್ವಾಮಿ-ಭಾರತೀಯ ಜನತಾ ಪಾರ್ಟಿ, ಡಿ.ಟಿ.ಶ್ರೀನಿವಾಸ್ - ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಕಿಷನ್.ಎಂ.ಜಿ- ಕರ್ನಾಟಕ ರಾಷ್ಟ್ರ ಸಮಿತಿ, ಪಕ್ಷೇತರರಾಗಿ ಡಾ.ಜಿ.ಹೆಚ್.ಇಮ್ರಾಪೂರ, ಕಪನಿಗೌಡ, ಎನ್.ಈ ನಟರಾಜ, ವೈ.ಆರ್.ನಾರಾಯಣಸ್ವಾಮಿ, ವೈ.ಎಂ. ನಾರಾಯಣಸ್ವಾಮಿ, ವೈ.ಸಿ.ನಾರಾಯಣಸ್ವಾಮಿ, ಬಾಬು ಯೋಗೀಶ್.ಆರ್, ಲೋಕೇಶ್ ತಾಳಿಕಟ್ಟೆ, ವನಿತಾ.ಎಸ್, ವಿನೋದ್ ಶಿವರಾಜ್, ಶ್ರೀನಿವಾಸ.ಬಿ, ಸೈಯದ್ ಆಫಾಖ್ ಅಹಮದ್ ಚುನಾವಣಾ ಕಣದಲ್ಲಿದ್ದರು.

**ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಶೇ.87.74 ಹಾಗೂ ಪದವೀಧರ ಕ್ಷೇತ್ರಕ್ಕೆ ಶೇ.80.95 ಮತದಾನ**

ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಎಸ್.ಎಲ್.ಭೋಜೆಗೌಡ-ಜನತಾದಳ, ಡಾ.ಕೆ.ಕೆ ಮಂಜುನಾಥ್ ಕುಮಾರ್-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಹಾಗೂ ಪಕ್ಷೇತರರಾಗಿ ಡಾ.ಅರುಣ್ ಹೊಸಕೊಪ್ಪ, ಡಾ. ನರೇಶ್ಚಂದ್ ಹೆಗ್ಡೆ, ನಂಜೇಶ್ ಬೆಣ್ಣೂರು, ಭಾಸ್ಕರ ಶೆಟ್ಟಿ. ಟಿ, ಕೆ.ಕೆ.ಮಂಜುನಾಥ್ ಕುಮಾರ್, ಪಕ್ಷೇತರ, ಡಾ.ಎಸ್. ಆರ್.ಹರೀಶ್ ಆಚಾರ್ಯ ಚುನಾವಣಾ ಕಣದಲ್ಲಿದ್ದರು.

ನೈರುತ್ಯ ಪದವೀಧರರ ಕ್ಷೇತ್ರಕ್ಕೆ ಆಯನೂರು ಮಂಜುನಾಥ-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಡಾ.ಧನಂಜಯ ಸರ್ಜಿ-ಭಾರತೀಯ ಜನತಾ ಪಾರ್ಟಿ, ಜಿ.ಸಿ.ಪಾಟೀಲ್-ಸರ್ವ ಜನತಾ ಪಾರ್ಟಿ ಹಾಗೂ ಪಕ್ಷೇತರರಾಗಿ ದಿನಕರ ಉಳ್ಳಾಲ್, ಎಸ್.ಪಿ.ದಿನೇಶ್, ಬಿ.ಮಹಮ್ಮದ್ ತುಂಬೆ, ಕೆ.ರಘುಪತಿ ಭಟ್, ಡಾ.ಶೇಕ್ ಬಾವ ಮಂಗಳೂರು, ಷಡಾಕ್ಷರಪ್ಪ ಜಿ.ಆರ್, ಷಹಾರಾಜ್ ಮುಜಾಹಿದ್ ಸಿದ್ದಿಕ್ಕಿ ಕಣದಲ್ಲಿದ್ದರು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 40X60 ದಕ್ಷಿಣ, 100 ಅಡಿ ರಸ್ತೆಯ ಹಿಂಭಾಗದ 40 ಅಡಿ ರಸ್ತೆಗೆ
**ಮಾಲೀಕರು : 96633 35235**
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಸೈಟುಗಳು ಮಾರಾಟಕ್ಕಿವೆ**
KHB ಕಾಲೋನಿ (Judge Quarters ಹತ್ತಿರ) ಉತ್ತರ 50x80, ಪಶ್ಚಿಮ 30x50, ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಪೂರ್ವ 30x40, ಪಶ್ಚಿಮ 30x50, ಉತ್ತರ 30x50, ವಿದ್ಯಾನಗರ Coffee Day ಸರ್ಕಲ್ ಹತ್ತಿರ ದಕ್ಷಿಣ 50x85.
**ಐಗೂರು ವಿಜಯಕುಮಾರ**
**99457 02495**

**ERA GROUP OF COMPANIES CALL CENTRE**
**ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ**
ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು
QUALIFICATION : SSLC TO DEGREE
5000 K TO 12,000 K + INCENTIVES
ಸ್ಥಳ : K.R. MARKET, DAVANGERE.
**95350 51589, 78670 75786**

**ಮನೆ ಬಾಡಿಗೆಗೆ ಇದೆ**
ನಂ. 4275/366, 4ನೇ ಮುಖ್ಯರಸ್ತೆ, 10A ಅಡ್ಡ ರಸ್ತೆ, ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಬೋರ್ ಹಾಗೂ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇರುವ ಮೊದಲನೇ ಮಹಡಿಯ ಒಂದು ಬೆಡ್ ರೂಮ್‌ನ ಮನೆ ಬಾಡಿಗೆಗೆ ಇದೆ.
**98442 01186, 98804 93817**

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
**91642 22937**

**ಮನೆ ಬಾಡಿಗೆಗೆ ಇದೆ**
ಬಾಲಕರ ವೈದ್ಯಕೀಯ ಹಾಸ್ಟೆಲ್ ರಸ್ತೆ, 10ನೇ ಮೇನ್‌ನಲ್ಲಿ ಸಂಪೂರ್ಣ ಸುಸಜ್ಜಿತ (fully furnished) ಮೂರು ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
**99861 21251**

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x55 ಅಕ್ಕ-ಪಕ್ಕ, 40x60 ಅಕ್ಕ-ಪಕ್ಕ 40x80, ಪಶ್ಚಿಮ 30x40, 30x50, ಬನಶಂಕರಿ ಬಡಾವಣೆ ಪೂರ್ವ 30x57 (ಅಕ್ಕ-ಪಕ್ಕ) ಪಶ್ಚಿಮ 40x70 (ಅಕ್ಕ-ಪಕ್ಕ)
**ಐಗೂರು ವಿಜಯಕುಮಾರ**
**99457 02495**

**ಬಂಗಲೆ ಸೈಟುಗಳು ಮಾರಾಟಕ್ಕಿವೆ**
MCC 'A' Block (ಲಕ್ಷ್ಮಿ ಫ್ಲೋರ್ ಮಿಲ್ ಸರ್ಕಲ್) ದಕ್ಷಿಣ 90x145, ಸಿದ್ದವೀರಪ್ಪ ಬಡಾವಣೆ ಉತ್ತರ 90x95, ವಿದ್ಯಾನಗರ ದಕ್ಷಿಣ 50x85, ಶಿವ-ಪಾರ್ವತಿ ಬಡಾವಣೆ ದಕ್ಷಿಣ 6000 ಅಡಿ ಮತ್ತು 13000 ಅಡಿ
**ಐಗೂರು ವಿಜಯಕುಮಾರ**
**99457 02495**

**ಮನೆ ಮಾರಾಟಕ್ಕೆ ಬೇಕಾಗಿದೆ**
ದೇವರಾಜ ಅರಸು ಲೇಔಟ್‌ನಲ್ಲಿ ಮಾತ್ರ.
**99005 21848**

**ವಧು ಬೇಕಾಗಿದ್ದಾರೆ**
ಫೈನಾನ್ಸ್ / ಕಿರಾಣಿ ಮರ್ಚೆಂಟ್ 44 ವರ್ಷ ವಯಸ್ಸಿನ ವರನಿಗೆ ಎರಡನೇ ಮದುವೆಗೆ ವಧು (ವಿಚ್ಛೇದಿತೆ-ವಿಧವೆ) ಬೇಕಾಗಿದ್ದಾರೆ.
**89047 54519**

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
**ಸ್ಥಳ : ದೊಡ್ಡಬಾತಿ**
**88920 08800**

**ಜಮೀನು, ಸೈಟು ಮಾರಾಟಕ್ಕಿದೆ**
ಶಿವ-ಪಾರ್ವತಿ ನಗರ, ಅಶೋಕ ನಗರದಲ್ಲಿ & ಚಿಗಟೇರಿ ಲೇಔಟ್‌ನಲ್ಲಿ ಸೈಟ್, ಕಂಚಿಕೆರೆ ಗ್ರಾಮದ ಹತ್ತಿರ 5 ಎಕರೆ ಅಡಿಕೆ ತೋಟ & ಖಾಲಿ ಜಮೀನು ಮಾರಾಟಕ್ಕಿವೆ. ಬೇಕಾದವರು ಸಂಪರ್ಕಿಸಿ :
**72592 22590, 88675 15890**

**ಜಮೀನು ಮಾರಾಟಕ್ಕೆ ಬೇಕಾಗಿದೆ**
ದಾವಣಗೆರೆ ಸಿಟಿಯಿಂದ 10ಕೀ.ಮೀ ಒಳಗಡೆಯಲ್ಲಿ ಇರಬೇಕು. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
**ಮೊಬೈಲ್ : 99005 21848**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಸರ್ಕಾರಿ ನೌಕರಿಗಾಗಿ**
ಗವರ್ನಮೆಂಟ್ ಜಾಬ್‌ಗೆ ಸಂಪರ್ಕಿಸಿ. ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ.
**80733 42011**

**ಗೋಡೌನ್ ಬಾಡಿಗೆಗೆ ಇದೆ**
5000 Sq,ft. 40 HP ಕರೆಂಟ್ ಬಂಬೂ ಬಜಾರ್ ರೋಡ್, ಹೆಚ್.ಪಿ. ಪೆಟ್ರೋಲ್ ಬಂಕ್ ಹತ್ತಿರ.
**81477 53622**

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಕೆ.ಹೆಚ್.ಬಿ. ಕಾಲೋನಿ, ಅಮರಾವತಿ ಹೌಸಿಂಗ್ ಕಾಲೋನಿ ಪಕ್ಕದಲ್ಲಿ 30x40 ಅಳತೆಯ 5 ಸೈಟುಗಳು ನೇರವಾಗಿ ಮಾರಾಟಕ್ಕಿವೆ.
**98809-33630**

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
**ಸಮೃದ್ಧಿ ಅಕಾಡೆಮಿ**
**96202 62361**

**ಬೇಕಾಗಿದ್ದಾರೆ**
ಡ್ಯೂಟಿ ಡಾಕ್ಟರ್ಸ್, ಮಾರ್ಕೆಟಿಂಗ್ ಹುಡುಗರು, ರಿಸೆಪ್ಷನಿಸ್ಟ್, ಸ್ಟಾಫ್ ನರ್ಸ್ GNM/ ANM, ಆಯಾ, ವಾರ್ಡ್ ಬಾಯ್
**82176 80171**

**ಲೋನ್ ಕೊಡಲಾಗುವುದು**
ಹೋಮ್ ಲೋನ್, ಸೈಟ್ ಖರೀದಿ , ಮನೆ ಖರೀದಿ, ಕೋ ಆಪರೇಟಿವ್ ಬ್ಯಾಂಕ್ ಯಿಂದ BT TOP up ಮಾಡಲಾಗುತ್ತದೆ. ಆಸ್ತಿ ಮೇಲಿನ ಸಾಲದಲ್ಲಿ ಸಿಬಿಲ್ ಕಡಿಮೆ ಇದ್ದರೂ ಮಾಡಿ ಕೊಡುತೇವೆ,ಶಾಲಾ ಕಾಲೇಜು ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ 1ಕೋಟಿ ಯಿಂದ 50ಕೋಟಿ ವರೆಗೂ ಸಾಲ ಸೌಲಭ್ಯ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
**90199 03494**

**WANTED**
Experienced College Bus Drivers
( Driving Licence & Badge Compulsory)
& Experienced Hostel Wardens (Male & Female)
**THE TEAM ACADEMY**
Davanagere : Vidyanagara BIET Road, Anjaneya Badavane, Shivamogga : 2nd Stage, Ravindra Nagar, Savalanga Road.
CONTCT : IMMEDIATELY
99005 65795, 73376 52484

**WATER PROOFING & BUILDING SOLUTIONS**
- Water Proofing Solution
- Civil Work
- Planning, 3D Design
- Elevation
- Renovation Work of Building
- Interior Designing

Contact for any type of building Solutions.
**80501 63846**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಹೋಟೆಲ್ ಬಾಡಿಗೆಗಿದೆ**
15x90 ಅಳತೆಯ ಎಲ್ಲಾ ಸೌಕರ್ಯವುಳ್ಳ, ಬೋರ್ ವೆಲ್, ಮುನ್ಸಿಪಲ್ ನೀರಿನ ಸೌಲಭ್ಯ ಹಾಗೂ ಸಾಮಾನುಗಳ ಸಮೇತ ಬಾಡಿಗೆಗೆ ಇದೆ. (ಸಸ್ಯಹಾರಿ ಹಾಗೂ ಮಾಂಸಹಾರಿಗೆ ಅನುಕೂಲವಿದೆ)
**93417 10083**

**ಮನೆ ಬಾಡಿಗೆಗೆ ಇದೆ**
2BHK, ಫಸ್ಟ್ ಫ್ಲೋರ್, #159, 5ನೇ ಕ್ರಾಸ್, 1ನೇ ಮೇನ್, ಬಿ ಬ್ಲಾಕ್, ದೇವರಾಜ ಅರಸು ಲೇಔಟ್, ದಾವಣಗೆರೆ.
**99005 21848**

**ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ ಕಂ ರಿಸೆಪ್ಷನಿಸ್ಟ್ (ಮಹಿಳೆ)-2
ವಿದ್ಯಾರ್ಹತೆ : ಪಿಯುಸಿ ಟೈಲರಿಂಗ್ ಅನುಭವವುಳ್ಳವರಿಗೆ ಆದ್ಯತೆ
ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ)-1
ವಿದ್ಯಾರ್ಹತೆ : ಪಿಯುಸಿ, ದ್ವಿಚಕ್ರ ವಾಹನವುಳ್ಳವರಿಗೆ ಆದ್ಯತೆ.
ಮಾಸಿಕ ವೇತನ : 8000-10000/-
**95915 01592**

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
**97402 58276**

**ಶ್ರೀ ಗುರು ಬಕ್ಕೇಶ್ವರ ಚಿಟ್ಸ್ ಫಂಡ್ (ರಿ.)**
**ಹೊಸ ಚೀಟಿಯು ಪ್ರಾರಂಭ**
**ಒಂದು ಲಕ್ಷದ ಚೀಟಿ**
20 ಸದಸ್ಯರು, 20 ತಿಂಗಳು, ರೂ. 3,500/- ರೂಪಾಯಿಯಿಂದ 5,000/-ರೂ.ವರೆಗೆ
**ಎರಡು ಲಕ್ಷದ ಚೀಟಿ**
20 ಸದಸ್ಯರು, 20 ತಿಂಗಳು, ರೂ. 7,000/- ರೂಪಾಯಿಯಿಂದ 10,000/-ರೂ.ವರೆಗೆ
**5 ಲಕ್ಷದ ಚೀಟಿ**
20 ಸದಸ್ಯರು, 20 ತಿಂಗಳು, ರೂ. 17,500/- ರೂಯಿಂದ 25,000/- ರೂ.ಗಳು ಮಾತ್ರ.
**97383 65782, 74834 97996**

# ಜಗತ್ತಿನಲ್ಲಿ ತಂಬಾಕು ಎರಡನೇ ದೊಡ್ಡ ಕ್ಯಾನ್ಸರ್

## ಮಲೇಬೆನ್ನೂರಿನಲ್ಲಿನ ವಿಶ್ವ ತಂಬಾಕು ವಿರೋಧಿ ದಿನಾಚರಣೆಯಲ್ಲಿ ನಾಗರಾಜ್ ಕುಲಾಲ್ ಆತಂಕ



ಮಲೇಬೆನ್ನೂರು, ಜೂ. 3- ಇವತ್ತಿನ ಯುವ ಪೀಳಿಗೆ ಬರೀ ತಂಬಾಕು, ಗುಟ್ಕಾ ಮಾತ್ರ ಸೇವನೆ ಮಾತ್ತಿಲ್ಲ. ಜೊತೆಗೆ ಗಾಂಜಾ, ಹೆರಾಯಿನ್ ಸೇರಿದಂತೆ ವಿವಿಧ ಮಾದಕಗಳ ಸೇವನೆಯಿಂದ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ಕರ್ನಾಟಕ ಜನ ಜಾಗೃತಿ ವೇದಿಕೆಯ ಜಿಲ್ಲೆಯ ಯೋಜನಾಧಿಕಾರಿ ನಾಗರಾಜ್ ಕುಲಾಲ್ ಬೇಸರ ವ್ಯಕ್ತಪಡಿಸಿದರು.

ಅವರು, ಶುಕ್ರವಾರ ಪಟ್ಟಣದ ಸಿದ್ಧಾರೂಢ ಮಠದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳಲ್ಲಿ ಸಂಸ್ಕಾರದ ಕೊರತೆ ಇದ್ದು, ಅವರ ನಡತೆ, ನೀತಿಯ ಬಗ್ಗೆ ಹಿರಿಯರು ನಿಗಾ ವಹಿಸಬೇಕು. ಇಲ್ಲದಿದ್ದರೆ ಅವರು ಬೀದಿ ಪಾಲು ಆಗುತ್ತಾರೆಂದು ಎಚ್ಚರಿಸಿದರು.

ವಿಶ್ವಸಂಸ್ಥೆ ಹೇಳಿಕೆ ಪ್ರಕಾರ 2ನೇ ದೊಡ್ಡ ಕ್ಯಾನ್ಸರ್ ತಂಬಾಕು ಆಗಿದ್ದು, ಇದರ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವ 530 ಕಾರ್ಯಕ್ರಮಗಳನ್ನು ಈ ದಿನ ರಾಜ್ಯಾದ್ಯಂತ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಡಾ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಮಾಡಿದ್ದೇವೆ ಎಂದು ನಾಗರಾಜ್ ಕುಲಾಲ್ ತಿಳಿಸಿದರು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಜಿ.ಮಂಜುನಾಥ್ ಪಟೇಲ್ ಮಾತನಾಡಿ, ನಾನು ಕೂಡಾ ಸಿಗರೇಟ್ ಸೇವನೆ ಮಾಡುತ್ತಿದ್ದು, ಈಗ ಅದರಿಂದ ಹೊರಬಂದು ಆರೋಗ್ಯ ಉಳಿಸಿಕೊಂಡಿದ್ದೇನೆಂಬ ತೃಪ್ತಿ ನನಗಿದೆ. ಹಾಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಧರ್ಮಸ್ಥಳ ಯೋಜನೆ ಮಾಡದ ಜನಪರ ಕಾರ್ಯಕ್ರಮಗಳು ಉಳಿದಿಲ್ಲ ಎಂದರು.

ಸಂಪನ್ಮೂಲ ವ್ಯಕ್ತಿ ಜಿಗಳಿಯ ಡಾ. ಎನ್. ನಾಗರಾಜ್ ಮಾತನಾಡಿ, ಹಲ್ಲು ನೋವಿಗೆ ಕೆಲವರು ತಂಬಾಕು ಸೇವನೆ ಮಾಡುವ ಪದ್ಧತಿ ಮೌಢ್ಯದಿಂದ ಕೂಡಿದೆ ಎಂದರು. ತಂಬಾಕು ಸೇವನೆಯಿಂದ ಕ್ಯಾನ್ಸರ್ ಅಷ್ಟೇ ಅಲ್ಲ. ಹೃದಯಾಘಾತ, ಅನಿಮೀಯಾ, ಥೈರಾಡ್ ಗ್ರಂಥಿಗೆ ಹಾನಿ ಆಗುತ್ತದೆ ಎಂದು ಎಚ್ಚರಿಸಿದರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಹೆಚ್.ಎಂ. ಸದಾನಂದ್ ಮಾತನಾಡಿ, ಮದ್ಯವ್ಯಸನಿಗಳ ಮನೆಯಲ್ಲಿ ಸಂತೋಷ, ನೆಮ್ಮದಿ ಇರಲ್ಲ ಎಂದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿ, ಮಹಿಳೆಯರು ಪ್ರೀತಿಯಿಂದ ಪುರುಷರನ್ನು ದುಶ್ಚಟಗಳಿಂದ ದೂರ ಮಾಡುವ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕೆಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್, ಒಕ್ಕೂಟದ ಅಧ್ಯಕ್ಷೆ ಸುಧಾ, ತಾ. ಜ್ಞಾನ ವಿಕಾಸ ಮೇಲ್ವೆಚಾರಕಿ ಸವಿತಾ, ಮಲೇಬೆನ್ನೂರು ವಲಯದ ಮೇಲ್ವೆಚಾರಕಿ ಸಂಪತ್ ಲಕ್ಷ್ಮಿ ಸೇರಿದಂತೆ ಸಂಘಗಳ ಮಹಿಳಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಹರಪನಹಳ್ಳಿ : ನಿರಂತರ ಪರಿಶ್ರಮ, ಸತತ ಪ್ರಯತ್ನ, ತ್ಯಾಗದಿಂದ ಯಶಸ್ಸು ಸಾಧ್ಯ



ಹರಪನಹಳ್ಳಿ, ಜೂ.3- ಯಶಸ್ಸು ಸುಲಭವಾಗಿ ದೊರಕುವಂತಹದ್ದಲ್ಲ, ನಿರಂತರ ಪರಿಶ್ರಮ, ಸತತ ಪ್ರಯತ್ನ, ತ್ಯಾಗದಿಂದ ಮಾತ್ರ ಯಶಸ್ಸು ಸಿಗುತ್ತದೆ. ತಮಗೆ ದೊರಕಿದ ಪ್ರಶಸ್ತಿ ಒಂದು ವರ್ಷದ ನಿರಂತರ ಪ್ರಯತ್ನದ ಪ್ರತಿಫಲ ಎಂದು ನವಜ್ಯೋತಿ ಸಂಸ್ಥೆಯ ಅಧ್ಯಕ್ಷರಾದ ಸಪ್ನ ಮಲ್ಲಿಕಾರ್ಜುನ ಅಭಿಪ್ರಾಯಪಟ್ಟರು.

ಪಟ್ಟಣದ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಬಸಮ್ಮ ಕಲಾ ಮಂದಿರದಲ್ಲಿ ದಿ.ಬಣಕಾರ ಶಾರದಮ್ಮ, ದಿ.ತರಕಾರಿ ಬಸಮ್ಮ ಮತ್ತು ದಿ.ಕೆ. ರತ್ನಮ್ಮನವರ ಸ್ಮರಣಾರ್ಥ ಏರ್ಪಡಿಸಿದ್ದ 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇರುವೆ ಹಿಮಾಲಯ ಪರ್ವತ ಏರಿ ಸಾಧಿಸಿದ ಪ್ರೇರಕ ಕಥೆ ಮತ್ತು ಸ್ವಾತಂತ್ರ್ಯ ಪಡೆದ ಉದಾಹರಣೆಗಳನ್ನು ಹೇಳಿ, ವಿದ್ಯಾರ್ಥಿಗಳಿಗಳು ಇದೇ ರೀತಿ ಪ್ರಯತ್ನ ಪಟ್ಟರೆ ಗೆಲುವು ನಿಮ್ಮದೇ ಎಂದು ಪ್ರೇರಕ ನುಡಿಗಳನ್ನಾಡಿದರು.

ಪುರಸಭಾ ಮಾಜಿ ಅಧ್ಯಕ್ಷರಾದ ಪುಷ್ಪಾ ದಿವಾಕರ್ ಮಾತನಾಡಿ, ಮಲ್ಲಿಕಾರ್ಜುನ ದಂಪತಿಯ ಸಮಾಜ ಮುಖಿ ಕಾರ್ಯಕ್ರಮವನ್ನು ಶ್ಲಾಘಿಸಿದರು.

ಮುರಾರ್ಜಿ ವಸತಿ ಶಾಲೆ ಪ್ರಾಚಾರ್ಯ ಕೆ.ಶಶಿಧರ ಮಾತನಾಡಿ, ಉಪನ್ಯಾಸಕ ಹೆಚ್. ಮಲ್ಲಿಕಾರ್ಜುನ ತಮ್ಮ ಸಂಬಳದ ಅರ್ಧ ಭಾಗವನ್ನು ಇಂತಹ ಕಾರ್ಯಕ್ರಮಗಳಿಗೆ ವಿನಿಯೋಗಿಸುತ್ತಿದ್ದಾರೆ. ಅವರ ಸೇವೆ ಶ್ಲಾಘನೀಯ ಎಂದು ಹೇಳಿದರು.

ಎಸ್.ಯು.ಜೆ.ಎಂ. ಕಾಲೇಜಿನ ಕನ್ನಡ ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ ಪ್ರಾಸ್ತಾವಿಕವಾಗಿ ಮಾತನಾಡಿ, ಸನ್ಮಾನ ಪಡೆದ ವಿದ್ಯಾರ್ಥಿಗಳು ಮುಂದೆ ಕನ್ನಡ ನಾಡು ನುಡಿ ಮತ್ತು ಸಮಾಜ ಸೇವೆ ಮಾಡುವಂತಾಗಬೇಕು. ವಿದ್ಯಾರ್ಥಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಬೆಳೆದು ಇಂತಹ ಕಾರ್ಯಕ್ರಮವನ್ನು ಮಾಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಅಧ್ಯಕ್ಷತೆಯನ್ನು ಹೂವಿನ ಹಡಗಲಿ ಪುರಸಭಾ ಮಾಜಿ ಸದಸ್ಯರಾದ ವಜ್ರನಾಭಿ ಬಣಕಾರ ವಹಿಸಿದ್ದರು.

ರೈತ ಭಾರತ ಕಿಸಾನ್ ಸಂಘದ ತಾಲ್ಲೂಕು ಉಪಾಧ್ಯಕ್ಷ ಹುಲಿಕಟ್ಟಿ ರೇವಣ್ಣ ಕುಂಬಾರ, ಕೆ. ಮಂಜುಳ, ಮಕ್ಬೂಲ್ ಬಾಷಾ, ಉಪನ್ಯಾಸಕ ಸಿ.ಎಂ.ಕೊಟ್ರಯ್ಯ ಉಪಸ್ಥಿತರಿದ್ದರು.

## ಮತಯಂತ್ರ ಧ್ವಂಸಗೊಳಿಸಿದ್ದ ಶಾಸಕ : ಎಣಿಕೆ ಕೇಂದ್ರಕ್ಕೆ ನಿಷೇಧ

ನವದೆಹಲಿ, ಜೂ. 3 – ಚುನಾವಣೆ ವೇಳೆ ಮತಯಂತ್ರವನ್ನು ಧ್ವಂಸಗೊಳಿಸಿದ್ದ ವೈ.ಎಸ್.ಆರ್. ಕಾಂಗ್ರೆಸ್ ಪಾರ್ಟಿ ಶಾಸಕ ಪಿನ್ನೆಲ್ಲಿ ರಾಮಕೃಷ್ಣ ರೆಡ್ಡಿ ಅವರು ಮತ ಎಣಿಕೆ ಕೇಂದ್ರ ಪ್ರವೇಶಿಸಬಾರದು ಎಂದು ಸುಪ್ರೀಂ ಕೋರ್ಟ್ ನಿರ್ಬಂಧಿಸಿದೆ.

ಮಚೆರ್ಲಾ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ರೆಡ್ಡಿ ಮತಯಂತ್ರ ಧ್ವಂಸಗೊಳಿಸುವ ವಿಡಿಯೋ ಬೆಳಕಿಗೆ ಬಂದಿತ್ತು.

ಈ ವಿಡಿಯೋ ವೀಕ್ಷಿಸಿದ ನ್ಯಾಯಮೂರ್ತಿಗಳಾದ ಅರವಿಂದ ಕುಮಾರ್ ಹಾಗೂ ಸಂದೀಪ್ ಮೆಹ್ತ ಅವರನ್ನು ಒಳಗೊಂಡ ಪೀಠ, ರೆಡ್ಡಿಗೆ ನಿರೀಕ್ಷಣಾ ಜಾಮೀನು ನೀಡಿದ್ದನ್ನು ಪ್ರಶ್ನಿಸಿದೆ. ಈ ರೀತಿ ಜಾಮೀನು ನೀಡಿರುವುದು ಕಾನೂನು ವ್ಯವಸ್ಥೆಯ ಅಣಕ ಎಂದೂ ಹೇಳಿದೆ.

ಜಾಮೀನು ನೀಡಿರುವುದು ಸಂಪೂರ್ಣ ತಪ್ಪಿನ ಆದೇಶ ಎಂಬುದು ವಿಡಿಯೋ ನೋಡಿದ ನಂತರ ತೀರ್ಮಾನಕ್ಕೆ ಬಂದಿರುವುದಾಗಿ ಪೀಠ ಹೇಳಿದೆ.

ಆಂಧ್ರ ಪ್ರದೇಶದ ವಿಧಾನಸಭೆ ಹಾಗೂ ಲೋಕಸಭೆ ಎರಡಕ್ಕೂ ಏಕಕಾಲಕ್ಕೆ ಚುನಾವಣೆ ನಡೆದಿತ್ತು.

ಶಾಸಕರಿಗೆ ನೀಡಿರುವ ಮಧ್ಯಂತರ ಜಾಮೀನು ವಾಪಸ್ ಪಡೆಯಬೇಕು ಎಂದು ಟಿ.ಡಿ.ಪಿ. ಚುನಾವಣಾ ಏಜೆಂಟ್ ಶೇಷಗಿರಿ ರಾವ್ ನಂಬೂರಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಮತಯಂತ್ರ ಧ್ವಂಸಗೊಳಿಸಿದ ವಿಡಿಯೋ ಸಾಕ್ಷಿ ಇದ್ದರೂ ಸಹ ಪೊಲೀಸರು ಶಾಸಕರ ವಿರುದ್ಧ ಪ್ರಕರಣ ದಾಖಲಿಸಿಲ್ಲ. ಕೆಲ ಅನಾಮಿಕರ ವಿರುದ್ಧವಷ್ಟೇ ಪ್ರಕರಣ ದಾಖಲಿಸಿದ್ದಾರೆ ಎಂದವರು ಹೇಳಿದ್ದರು.

## ಪ್ರತಿಮಾ ಸಭಾದ ಕನ್ನಡ ಮೇಷ್ಟ್ರು ಅಪ್ರತಿಮರಾದರು : ಶಿವು ಕುರ್ಕಿ ಕಂಬನಿ

ದಾವಣಗೆರೆ, ಜೂ.3- ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಅವರ ನಿಧನಕ್ಕೆ ಸಾಹಿತಿ ಆರ್. ಶಿವಕುಮಾರ ಸ್ವಾಮಿ ಕುರ್ಕಿ ಕಂಬನಿ ಮಿಡಿದಿದ್ದಾರೆ.

ಧ.ರ.ಮಾ. ಕಾಲೇಜಲ್ಲಿ ನನ್ನ ವಿದ್ಯಾಗುರುಗಳಾಗಿದ್ದ ಈಶ್ವರಪ್ಪ ಅವರು ಪ್ರತಿಮಾಸಭಾದ ಮೂಲಕ ನನ್ನನ್ನು ರಂಗಭೂಮಿಯಲ್ಲಿ ನೆಲೆಯೂರಿಸಿ ಬೆಳೆಸಿದಂತವರು ಎಂದು ಕುರ್ಕಿ ಕೃತಜ್ಞತೆ ಸಲ್ಲಿಸಿದ್ದಾರೆ.

ಈಶ್ವರಪ್ಪ ಅವರ ಕನ್ನಡ ಓದುವ ಬರೆಯುವ ಮಾತನಾಡುವ ಗಾಂಭೀರ್ಯ ಮಧುರಕಂಠದ ಶೈಲಿಯೇ ನನ್ನನ್ನು ಕನ್ನಡ ಮೇಷ್ಟ್ರು ಆಗುವಂತೆ ಮಾಡಿತ್ತು. ಅವರಿಲ್ಲದ ದೇವನಗರಿಯ ಸಾಂಸ್ಕೃತಿಕ ವಲಯ ಬರಡಾಗಲಿದೆ ಎನಿಸುತ್ತಿದೆ. ಪ್ರತಿಮಾಸಭಾದ ಮೂಲಕ ದಾವಣಗೆರೆಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದ ಮೇಷ್ಟ್ರು ಅಪ್ರತಿಮರಾದರು ಎಂದು ಶಿವಕುಮಾರಸ್ವಾಮಿ ಕುರ್ಕಿ ಬಣ್ಣಿಸಿದ್ದಾರೆ.

## ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಅರ್ಜಿ

ದಾವಣಗೆರೆ, ಮೇ 31 - ಬಸವ ಬಳಗದ ವತಿಯಿಂದ ವಿದ್ಯಾರ್ಥಿ ನಿಲಯದಲ್ಲಿ ಪಿ.ಯು.ಸಿ., ಡಿಗ್ರಿ,ಇಂಜಿನಿಯರಿಂಗ್ ಮತ್ತು ಬಿ.ಎಸ್.ಸಿ. ಬಿಎಡ್ ಹಾಗೂ ನರ್ಸಿಂಗ್ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ 2024-25ನೇ ಸಾಲಿಗೆ ಪ್ರವೇಶ ಪ್ರಾರಂಭವಾಗಿದೆ. ವಿವರಕ್ಕೆ ಸಂಪರ್ಕಿಸಿ: 99720 84938, 90084 09498.

## ಶಾಲಾ ಪ್ರಾರಂಭೋತ್ಸವ : ಮಹಿಳಾ ಸೇವಾ ಸಮಾಜದಿಂದ ಮಕ್ಕಳಿಗೆ ಸ್ವಾಗತ



ದಾವಣಗೆರೆ, ಜೂ. 3- ಶಾಲಾ ಪ್ರಾರಂಭೋತ್ಸವ ಪ್ರಯುಕ್ತ ಪ್ರವಾಸಿ ಮಂದಿರ ರಸ್ತೆಯ ಮಹಿಳಾ ಸೇವಾ ಸಮಾಜದ ಪದಾಧಿಕಾರಿಗಳು, ಶಿಕ್ಷಕ ವೃಂದದವರು ಮಕ್ಕಳನ್ನು ಗುಲಾಬಿ ಹೂ ಹಾಗೂ ಸಿಹಿ ನೀಡಿ ಸ್ವಾಗತಿಸಿದರು.

## ಹೇರ್ ಕಟಿಂಗ್ ತರಬೇತಿ



ದಾವಣಗೆರೆ, ಜೂ. 3 - ಶಶಿ ಸಮಾಜದ ವತಿಯಿಂದ ಇಂಟರ್‌ನ್ಯಾಷನಲ್ ಹೇರ್ ಕಟಿಂಗ್ ಅಂಡ್ ಹೇರ್ ಕಲರಿಂಗ್ ತರಬೇತಿಯನ್ನು ನಡೆಸಲಾಯಿತು. ತರಬೇತಿ ನೀಡಿದ ಇಮ್ರಾನ್ ಅವರನ್ನು ಶಶಿ ಸಮಾಜದ ಅಧ್ಯಕ್ಷರಾದ ಪದ್ಮಜಾ ಗೌರವಿಸಿದರು. ಅಂಬುಜಾ, ವನಜಾಕ್ಷಿ, ಪದ್ಮ ಹಾಜರಿದ್ದರು.

## ಅಸ್ತಮಾ ಔಷಧಿ

ಚಳ್ಳಕೆರೆ, ಜೂ.3- ಇಲ್ಲಿನ ಡಾ.ಎಚ್.ಸಿ. ತಿಪ್ಪೇಸ್ವಾಮಿ ಅವರ ಮನೆಯಲ್ಲಿ ಇದೇ ದಿನಾಂಕ 8ರ ಬೆಳಗ್ಗೆ 6.44ಕ್ಕೆ ಮೃಗಶಿರಾ ಮಳೆ ಕೂಡುವ ಕಾಲಕ್ಕೆ ಅಸ್ತಮಾಕ್ಕೆ ಔಷಧಿ ಕೊಡಲಾಗುತ್ತದೆ. ಸಂಪರ್ಕಿಸಿ : 9449822224.

## ಕೊಟ್ಟೂರು ತಾಲ್ಲೂಕಿನಲ್ಲಿ ಶೇ.74.96 ಮತದಾನ



ಕೊಟ್ಟೂರು, ಜೂ. 3- ಕೊಟ್ಟೂರು ತಾಲ್ಲೂಕಿನಲ್ಲಿ ನಡೆದ ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ-2024ಕ್ಕೆ ಸಂಬಂಧಿಸಿದಂತೆ ಶಾಂತಿಯುತ ಮತದಾನ ನಡೆದಿದ್ದು, ಶೇ.74.96 ರಷ್ಟು ಮತದಾನವಾಗಿರುತ್ತದೆ.

## ಶೈಕ್ಷಣಿಕ ಚಾರಿಟೇಬಲ್ ಟ್ರಸ್ಟ್‌ನ ವಾರ್ಷಿಕೋತ್ಸವ

ದಾವಣಗೆರೆ, ಜೂ.3- ಇಲ್ಲಿನ ಜಯನಗರದಲ್ಲಿನ ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟೇಬಲ್ ಟ್ರಸ್ಟ್‌ನ ಕಚೇರಿಯಲ್ಲಿ ಶನಿವಾರ ಟ್ರಸ್ಟಿನ 4ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪೋತುಲ ಶ್ರೀನಿವಾಸ ಅವರ ಜನ್ಮ ದಿನ ಆಚರಿಸಲಾಯಿತು.

ಈ ವೇಳೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಗುರು ಹಾಗೂ ಸಾಮಾಜಿಕ ಸೇವೆ ಮಾಡದೇ ಸತ್ತರೆ ಜೀವನ ವ್ಯರ್ಥ ಎಂದು ಬಸವಣ್ಣನವರ ನಿದರ್ಶನದೊಂದಿಗೆ ಹೇಳಿದರು.

ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್ ಮತ್ತು ರೈತಪರ ಹೋರಾಟಗಾರ ಸತೀಶ್ ಕೊಳೇನ ಹಳ್ಳಿ ಮಾತನಾಡಿದರು. ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ, ಮಾಜಿ ಶಾಸಕ ಎಸ್.ಎ ರವೀಂದ್ರನಾಥ್, ಲುಂಬಿನಿ ಪ್ಯಾರಾ ಮೆಡಿಕಲ್ ಕಾಲೇಜಿನ ಕಾರ್ಯದರ್ಶಿ ಜಿ.ವಿ. ಗಂಗಾಧರ್, ಹಸಿರು ದಳ ವ್ಯವಸ್ಥಾಪಕ ಎಚ್.ಎ. ಗುರುರಾಜ್ ಮತ್ತು ಇತರರು ಇದ್ದರು.



## ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್

ದಾವಣಗೆರೆ, ಜೂ.3- ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ ಪ್ರಸಕ್ತ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

ಈ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ನಂ. 44, 'ಎ' ಬ್ಲಾಕ್, 2ನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ಹರಿಹರ ರಸ್ತೆ, ದಾವಣಗೆರೆ ಇಲ್ಲಿ ಪ್ರಕಟಿಸಲಾಗಿದೆ. ಈ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶಾಲಾ ಆಯ್ಕೆಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿಗೆ ಕಡ್ಡಾಯವಾಗಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಬೇಕು.

ಅಲ್ಪಸಂಖ್ಯಾತ ವರ್ಗದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಇದೇ ದಿನಾಂಕ 6 ರಂದು ಬೆಳಿಗ್ಗೆ 10.30 ರಿಂದ ಸಂಜೆ 5 ಗಂಟೆಯವರೆಗೆ, ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಬೆಳಿಗ್ಗೆ 10.30 ರಿಂದ ಸಂಜೆ 5 ಗಂಟೆಯವರೆಗೆ ಕೌನ್ಸಿಲಿಂಗ್ ನಡೆಸಲಾಗುವುದು. ಈ ದಿನಾಂಕಗಳಂದು ಕೌನ್ಸಿಲಿಂಗ್‌ನಲ್ಲಿ ಭಾಗ ವಹಿಸದೇ ಇರುವ ವಿದ್ಯಾರ್ಥಿಗಳನ್ನು ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ 08192-250022 ನ್ನು ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

## ಡಿಆರ್ ಆರ್. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಿಂದ ಅರ್ಜಿ ಆಹ್ವಾನ

ದಾವಣಗೆರೆ, ಜೂ.3- - ಪ್ರಸಕ್ತ ಸಾಲಿನಲ್ಲಿ ಡಿಆರ್ ಆರ್. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಟ ಶೇ. 35% ಅಂಕಗಳನ್ನು ಪಡೆದಿರುವ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ಸ್ವೀಕರಿಸುವ ನಾಳೆ ದಿನಾಂಕ 4 ರ ಮಂಗಳವಾರ ಸಂಜೆ 5.30 ರೊಳಗೆ ಸಲ್ಲಿಸತಕ್ಕದ್ದು, ತಾತ್ಕಾಲಿಕ ಅಥವಾ ಅಂತಿಮ ಪಟ್ಟಿಯನ್ನು ನಾಡಿದ್ದು ದಿನಾಂಕ 5 ರಂದು ಬಿಡುಗಡೆಗೊಳಿಸಲಾಗುತ್ತಿದೆ. ದಿನಾಂಕ 6 ರಂದು ಸೀಟು ಹಂಚಿಕೆ ಪ್ರಕ್ರಿಯೆ ನಡೆಯಲಿದೆ.

## ಡಾ. ಎಂ. ಜಿ. ಈಶ್ವರಪ್ಪ ನಿಧನಕ್ಕೆ ವನಿತಾ ಸಾಹಿತ್ಯ ವೇದಿಕೆ ಸಂತಾಪ

ದಾವಣಗೆರೆ, ಜೂ. 3 - ಜಾನಪದ ವಿದ್ವಾಂಸ, ಸಾಂಸ್ಕೃತಿಕ ರೂವಾರಿ, ಎಂ.ಜಿ.ಈಶ್ವರಪ್ಪ ನಿಧನಕ್ಕೆ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ಸಂತಾಪ ವ್ಯಕ್ತಪಡಿಸಿದೆ ಎಂದು ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮ ನಾಗರಾಜ್, ಶ್ರೀಮತಿ ವೀಣಾ ಕೃಷ್ಣಮೂರ್ತಿ ಸಂಧ್ಯಾ ಸುರೇಶ್, ಟಿ.ಎಸ್ ಶೈಲ, ಶ್ರೀಮತಿ ಜಯಮ್ಮ ನೀಲಗುಂದ, ಶ್ರೀಮತಿ ಸುನಿತಾ ಪ್ರಕಾಶ್, ಶ್ರೀಮತಿ ಗಿರಿಜಾ ಸಿದ್ದಲಿಂಗಪ್ಪ ಸೇರಿದಂತೆ ಎಲ್ಲ ಸದಸ್ಯರು ಈಶ್ವರಪ್ಪನವರ ಅಗಲುವಿಕೆಗೆ ಕಂಬನಿ ಮಿಡಿದಿದ್ದಾರೆ.

# ತಾಪಮಾನ ಏರಿಕೆಯಿಂದ ವಿಶ್ವಾದ್ಯಂತ ವೃದ್ಧರಿಗೆ ಸಂಕಷ್ಟ



### ವೃದ್ಧರಿಗೆ ಹೆಚ್ಚಿನ ಆರೋಗ್ಯ ಸಮಸ್ಯೆ

**ಹೆಚ್ಚಿನ ತಾಪಮಾನ ಎಲ್ಲರಿಗೂ ಬಾಧಿಸುತ್ತದೆ. ಆದರೆ, ವೃದ್ಧರಿಗೆ ತಾಪಮಾನ ಹೆಚ್ಚು ಆರೋಗ್ಯ ಸಮಸ್ಯೆ ಹಾಗೂ ಜೀವಕ್ಕೆ ಅಪಾಯ ತರುತ್ತದೆ. ತಾಪಮಾನದ ಕಾರಣದಿಂದಾಗಿ ಹೃದಯ, ಶ್ವಾಸಕೋಶ ಹಾಗೂ ಕಿಡ್ನಿ ಸಮಸ್ಯೆಗಳು ಉಲ್ಬಣಿಸುತ್ತವೆ.**

**ವೃದ್ಧರು ಕಿರಿ ವಯಸ್ಸಿನವರಷ್ಟು ಬೆವರುವ ಸಾಮರ್ಥ್ಯ ಹೊಂದಿರುವುದಿಲ್ಲ. ಕೆಲ ಸಾಮಾನ್ಯ ಔಷಧಿಗಳು ಅವರ ಬೆವರುವ ಸಾಮರ್ಥ್ಯವನ್ನು ಇನ್ನಷ್ಟು ಕಡಿಮೆ ಮಾಡುತ್ತವೆ. ಇದರಿಂದಾಗಿ ಅವರ ದೇಹದ ತಾಪಮಾನದಲ್ಲಿ ತೀವ್ರ ಏರಿಕೆಯಾಗುತ್ತದೆ.**

**ಇದರ ಜೊತೆಗೆ ಶುದ್ಧ ಕುಡಿಯುವ ನೀರಿನ ಕೊರತೆ, ವಾಯು ಗುಣಮಟ್ಟ ಕುಂಠಿತವಾಗುವುದು ಇನ್ನಷ್ಟು ಸಮಸ್ಯೆ ತರಲಿವೆ. ಈಗಾಗಲೇ ಶ್ವಾಸಕೋಶದ ತೊಂದರೆ ಎದುರಿಸುತ್ತಿದ್ದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ. ಅದರಲ್ಲೂ ತೇವಾಂಶ ಹೆಚ್ಚಾಗಿದ್ದರಂತೂ, ಮಧ್ಯಮ ಪ್ರಮಾಣದ ಬಿಸಿಲೂ ಸಂಕಷ್ಟ ಹೆಚ್ಚಿಸುತ್ತದೆ.**

ನವದೆಹಲಿ, ಮೇ 28 - ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಏಷಿಯಾದಲ್ಲಿ ತೀವ್ರ ಬಿಸಿಗಾಳಿಯ ಪ್ರಕೋಪ ಕಂಡು ಬರುತ್ತಿದೆ. ತಾಪಮಾನದ ತೀವ್ರತೆ ಮೇ ತಿಂಗಳಲ್ಲಿ ದೆಹಲಿಯಲ್ಲಿ 52.3 ಡಿಗ್ರಿ ಸೆಲ್ಸಿಯಸ್ ಹಂತಕ್ಕೆ ತಲುಪಿದೆ. ಚುನಾವಣಾ ಸಮಯದಲ್ಲೇ ಬಂದ ಈ ಬಿಸಿಲು ಎಲ್ಲರನ್ನೂ ಹೈರಾಣು ಮಾಡುತ್ತಿದೆ.


ಈ ತಾಪಮಾನ ಏರಿಕೆ ಭಾರತಕ್ಕಷ್ಟೇ ಸೀಮಿತವಲ್ಲ. ಏಷಿಯಾದ ಉತ್ತರದ ಜಪಾನ್‌ನಿಂದ ಹಿಡಿದು ದಕ್ಷಿಣದ ಫಿಲಿಪೈನ್ಸ್‌ವರೆಗೆ ನಿರಂತರ ಬಿಸಿಗಾಳಿಯ ಅಲೆ ನಿತ್ಯ ಜೀವನವನ್ನು ಸಂಕಷ್ಟಕ್ಕೆ ದೂಡಿದೆ.

ಕಾಂಬೋಡಿಯಾದಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ್ದರೆ, ಥೈಲ್ಯಾಂಡ್‌ನಲ್ಲಿ ಬೆಳೆಗಳ ನಾಶವಾಗಿದೆ. ನೂರಾರು ಜನರು ಬಿಸಿಗಾಳಿಗೆ ಸಿಲುಕಿ ಸಾವನ್ನಪ್ಪಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಬಿರು ಬಿಸಿಲ ಬೇಗೆ ವಿಶ್ವದಾದ್ಯಂತ ಕರಾಳ ಪರಿಣಾಮ ಬೀರುತ್ತಿದೆ. 2023ರಲ್ಲಿ ಅಮೆರಿಕದ ಫೀನಿಕ್ಸ್‌ನಲ್ಲಿ ತಾಪಮಾನ ಸತತ 31 ದಿನಗಳ ಕಾಲ 43.3 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿತ್ತು. ಇದನ್ನು 'ಭೂಮಿಯ ಮೇಲಿನ ನರಕ' ಎಂದು ಬಣ್ಣಿಸಲಾಗಿತ್ತು. ಹಾಗಿದ್ದರೆ 52 ಡಿಗ್ರಿ ಸೆಲ್ಸಿಯಸ್ ಮೀರುವ ತಾಪಮಾನವನ್ನು ಏನೆನ್ನಬೇಕು?

ಯುರೋಪ್ ಸಹ ಬಿಸಿ ಗಾಳಿಯಿಂದ ಮುಕ್ತವಾಗಿಲ್ಲ. ಗ್ರೀಕ್‌ನಲ್ಲಿ ಕಾಡ್ಗಿಚ್ಚು ಹರಡಲು ಹಾಗೂ ಸಾವು - ನೋವುಗಳು ಸಂಭವಿಸಲು ಬಿಸಿಗಾಳಿಯೇ ಕಾರಣವಾಗಿದೆ.

ಬೇರೆ ಬೇರೆ ದೇಶಗಳಲ್ಲಿ ಬಿಸಿಲಿನಿಂದ ಬೇರೆ ಬೇರೆ ಪರಿಣಾಮಗಳಾಗಿದ್ದರೂ, ಎಲ್ಲೆಡೆ ಕಂಡು ಬರುವ ಸಾಮಾನ್ಯ ಅಂಶ ಎಂದರೆ ವೃದ್ಧರು ಬಿಸಿಲಿನಿಂದ ಅತಿ ಹೆಚ್ಚು ಬಳಲುತ್ತಿದ್ದಾರೆ ಎಂಬುದು. ಮುಂಬರುವ ದಿನಗಳಲ್ಲಿ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸಲಿದೆ.



**ಹೆಚ್ಚುತ್ತಿರುವ ವೃದ್ಧರ ಸಂಖ್ಯೆ :**

ಒಂದೆಡೆ ವಿಶ್ವದಾದ್ಯಂತ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ಮತ್ತೊಂದೆಡೆ ವಿಶ್ವದಾದ್ಯಂತ ತಾಪಮಾನ ಹೆಚ್ಚಾಗುತ್ತಿದೆ. ಇವೆರಡೂ ಅಂಶಗಳಿಂದ ಗಂಭೀರ ಪರಿಣಾಮಗಳಾಗುತ್ತಿವೆ ಎಂದು ಬೋಸ್ಟನ್ ವಿಶ್ವವಿದ್ಯಾಲಯದ ಉಪನ್ಯಾಸಕರಾದ ದೆಬೊರಾ ಕಾರ್ ಹಾಗೂ ಇಯಾನ್ ಸೂ ವಿಂಗ್ ಅವರು ರೂಪಿಸಿರುವ ವರದಿ ತಿಳಿಸಿದೆ.

2015ರಿಂದ 2023ರ ನಡುವಿನ ಸರಾಸರಿ ತಾಪಮಾನ, 1880ರ ನಂತರ ಅತಿ ಹೆಚ್ಚಾಗಿದೆ. 1880ರಿಂದ ಜಾಗತಿಕವಾಗಿ ತಾಪಮಾನ ದಾಖಲಿಸುವುದು ಆರಂಭವಾಗಿತ್ತು.

ವಿಶ್ವದಾದ್ಯಂತ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. 2050ರ ವೇಳೆಗೆ 60 ವರ್ಷಕ್ಕೂ ಹೆಚ್ಚಿನವರ ಸಂಖ್ಯೆ ಈಗಿರುವುದಕ್ಕಿಂತ ದುಪ್ಪಟ್ಟಾಗಿ 210 ಕೋಟಿಗೆ ತಲುಪಲಿದೆ. ಆ ವೇಳೆಗೆ ಒಟ್ಟು ಜನಸಂಖ್ಯೆಯ ಶೇ.21ರಷ್ಟು ಜನರು ವೃದ್ಧರಾಗಿರಲಿದ್ದಾರೆ. ಪ್ರಸಕ್ತ ಈ ಪ್ರಮಾಣ ಶೇ.13ರಷ್ಟಾಗಿದೆ.

ಈ ಎರಡೂ ಪರಿಣಾಮಗಳಿಂದಾಗಿ ಬಿಸಿಲಿನಿಂದ ಪೀಡಿತರಾಗುವ ವೃದ್ಧರ ಪ್ರಮಾಣ ಗಣನೀಯವಾಗಿ ಹೆಚ್ಚಾಗಲಿದೆ. ಅಂದಾಜಿನ ಪ್ರಕಾರ, 2050ರ ವೇಳೆಗೆ ವಿಶ್ವದ ತಾಪಮಾನ 37.5 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿರುವ ಪ್ರದೇಶದಲ್ಲಿ 69 ವಯಸ್ಸು ಮೀರಿದ ಶೇ.23ರಷ್ಟು ವೃದ್ಧರು ನೆಲೆಸಲಿದ್ದಾರೆ. 250 ದಶಲಕ್ಷ ವೃದ್ಧರು ಅಪಾಯಕಾರಿ ತಾಪಮಾನ ಎದುರಿಸಬೇಕಾಗುತ್ತದೆ.

**ಆದಾಯದ ಕೊರತೆ :**

ಈ ವಲಯದ ಬಹುತೇಕ ವೃದ್ಧರು ಕಡಿಮೆ ಇಲ್ಲವೇ ಮಧ್ಯಮ ಆದಾಯದ ದೇಶಗಳಲ್ಲಿದ್ದಾರೆ. ಹೀಗಾಗಿ ಬಿಸಿ ವಾತಾವರಣ ಎದುರಿಸಲು ಅಗತ್ಯವಾದ ವಿದ್ಯುತ್, ತಾಪಮಾನ ನಿಯಂತ್ರಕ ಹಾಗೂ ಶುದ್ಧ ನೀರು ಹೊಂದುವುದು ಕಷ್ಟವಾಗಲಿದೆ.

ಉತ್ತರ ಅಮೆರಿಕ ಹಾಗೂ ಯುರೋಪ್ ಸೇರಿದಂತೆ ಉತ್ತರ ಗೋಳ ಇತಿಹಾಸದುದ್ದಕ್ಕೂ ಹೆಚ್ಚು ತಂಪಾಗಿದೆ. ಬಿಸಿ ಗಾಳಿಯ ಪ್ರದೇಶಗಳು ಏಷಿಯಾ, ಆಫ್ರಿಕ ಹಾಗೂ ದಕ್ಷಿಣ ಅಮೆರಿಕದಂತಹ ದಕ್ಷಿಣ ಗೋಳದಲ್ಲಿವೆ. ದಕ್ಷಿಣ ಗೋಳದಲ್ಲೇ ಜನಸಂಖ್ಯೆ ಪ್ರಮಾಣ ಹೆಚ್ಚಾಗುತ್ತಿದೆ. ಈ ಭಾಗದ ವೃದ್ಧರೇ ಹೆಚ್ಚು ಸಮಸ್ಯೆ ಎದುರಿಸಲಿದ್ದಾರೆ.

**ನಿದ್ರಾ ಭಂಗ :**

ರಾತ್ರಿ ವೇಳೆ ತಾಪಮಾನ ವೃದ್ಧರಿಗೆ ಇನ್ನಷ್ಟು ಸಂಕಷ್ಟ ತರುತ್ತದೆ. ರಾತ್ರಿ ತಾಪಮಾನ ಹೆಚ್ಚಾಗಿದ್ದರೆ ವೃದ್ಧರು ಸಮರ್ಪಕ ಪ್ರಮಾಣದ ನಿದ್ರೆ ಮಾಡಲು ಸಾಧ್ಯವಾಗುವುದಿಲ್ಲ. ಬಿರು ಬಿಸಿ ಅಲೆಯ ವಾತಾವರಣ ಮಾನಸಿಕ ನೆಮ್ಮದಿಯ ಮೇಲೂ ಪರಿಣಾಮ ಬೀರುತ್ತದೆ.

ಬಿರು ಬಿಸಿಲಿನ ಕಾರಣದಿಂದ ಮನೆಯೊಳಗೇ ಉಳಿದುಕೊಳ್ಳುವ ವೃದ್ಧರು ಏಕಾಂಗಿತನ, ಬೇಸರ ಹಾಗೂ ಖಿನ್ನತೆಗೆ ಸಿಲುಕುವ ಸಾಧ್ಯತೆ ಹೆಚ್ಚಾಗುತ್ತದೆ. ಮಧ್ಯಮ ಹಾಗೂ ಕಡಿಮೆ ಆದಾಯ ದೇಶಗಳಲ್ಲಿನ ಜನರು ಕಡಿಮೆ ಗುಣಮಟ್ಟದ ಮನೆಗಳಲ್ಲಿರುತ್ತಾರೆ. ಇವು ತಾಪಮಾನದ ಸಮಸ್ಯೆ ಹೆಚ್ಚಿಸುತ್ತವೆ.

**ಜಾಗತಿಕ ಎಚ್ಚರಿಕೆ ಗಂಟೆ :**

ಜಾಗತಿಕ ತಾಪಮಾನ ಹೆಚ್ಚಿಸುವ ತ್ಯಾಜ್ಯಗಳನ್ನು ಕಡಿಮೆ ಮಾಡಲು ವಿಶ್ವದಾದ್ಯಂತ ಕ್ರಮ ತೆಗೆದುಕೊಳ್ಳುವುದೇ ಈಗಿರುವ ಉತ್ತಮ ಮಾರ್ಗವಾಗಿದೆ. ವೃದ್ಧರನ್ನು ಬಿಸಿಲಿನಿಂದ ರಕ್ಷಿಸಲು ಅಗತ್ಯ ಕ್ರಮಗಳತ್ತ ಗಮನ ಹರಿಸಬೇಕಿದೆ. ಪ್ರತಿಯೊಂದು ಪ್ರಾಂತ್ಯ ಹಾಗೂ ಜನಸಂಖ್ಯೆಯ ಸ್ವರೂಪ ಆಧರಿಸಿ ಬೇರೆ ಬೇರೆ ರೀತಿಯ ಕ್ರಮಗಳ ಅಗತ್ಯವಿದೆ.

ಏರುತ್ತಿರುವ ತಾಪಮಾನ ಹಾಗೂ ಹೆಚ್ಚಾಗುತ್ತಿರುವ ವೃದ್ಧರ ವಿಷಯಗಳನ್ನು ಎದುರಿಸುವಲ್ಲಿ ಈ ದಶಕ ಅತ್ಯಂತ ಮಹತ್ವದ್ದಾಗಿದೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ. ಎಲ್ಲ ಪ್ರಾಂತ್ಯಗಳು, ಸಂಶೋಧಕರು, ವೈದ್ಯರು ಹಾಗೂ ನೀತಿ ರೂಪಿಸುವವರು ಈ ಎಚ್ಚರಿಕೆಯ ಗಂಟೆಗೆ ಕಿವಿಗೊಡಲೇ ಬೇಕಿದೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಡಿದ್ದು ಬಾದಾಮಿ ಅಮಾವಾಸ್ಯೆ



ದಾವಣಗೆರೆ, ಜೂ. 3 - ನಗರದ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಬಾದಾಮಿ ಅಮಾವಾಸ್ಯೆ ಪ್ರಯುಕ್ತ ಇದೇ ದಿನಾಂಕ 6ರ ಗುರುವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ದೇವರಮನೆ ಶಿವಕುಮಾರ್ ಮತ್ತು ಕುಟುಂಬದವರು ಪ್ರಸಾದದ ಸೇವಾಕರ್ತ ರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898) ಬಿ.ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ನಾಡಿದ್ದು ಬಾದಾಮಿ ಅಮಾವಾಸ್ಯೆ



ದಾವಣಗೆರೆ, ಜೂ.3- ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಬಾದಾಮಿ ಅಮಾವಾಸ್ಯೆ ಪ್ರಯುಕ್ತ ಇದೇ ದಿನಾಂಕ 6ರಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ಸರೋಜ ತೋಂಟೇಶ ಮಾನ್ವಿ ಮತ್ತು ಮಕ್ಕಳು (ಗದಗ), ಶ್ರೀಮತಿ ಅರ್ಚನಾ ಶಶಿಧರ ಮತ್ತು ಕುಟುಂಬದವರು (ಚಿತ್ರದುರ್ಗ) ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ಪೂಜೆಯ ಫಲ ಸಿಗಬೇಕಾದರೆ ನಿಷ್ಠೆ, ಪ್ರಾಮಾಣಿಕನಾಗಿರಬೇಕು

### ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಗೆ ಗಣ ಪದವಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀಗಳ ಹಿತನುಡಿ



ಶಿವಮೊಗ್ಗ, ಜೂ. 3- ನಿಜವಾದ ಪೂಜೆಯ ಫಲ ಸಿಗಬೇಕು ಅಂದರೆ ನಿಷ್ಠೆ ಮತ್ತು ಪ್ರಾಮಾಣಿಕನಾಗಿರಬೇಕು. ಜನರ ಸುಖವೇ ನಮ್ಮ ಸುಖ ಎಂದು ಭಾವಿಸಬೇಕು. ಸಜ್ಜನರ, ಅರಿವು-ಆಚಾರ ಒಂದಾಗಿರುವಂಥವರ, ಸಾತ್ವಿಕರ ಮನಸ್ಸಿಗೆ ನೋವಾಗದ ಹಾಗೆ ನಡೆದುಕೊಳ್ಳಬೇಕು. ಮನುಷ್ಯನಿಗೆ ಆಳವಾದ ಅನುಭಾವ ಪ್ರೀತಿಸುವಂತೆ, ಗೌರವಿಸುವಂತೆ ಮಾಡುತ್ತದೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶಿವಮೊಗ್ಗ ಜಿಲ್ಲೆ ಸಂತೆಕಡೂರಿನಲ್ಲಿ ಮೊನ್ನೆ ನಡೆದ ಜಗಜ್ಯೋತಿ ಗ್ರಂಥ ಲೋಕಾರ್ಪಣೆ, ಸಾಂಸ್ಕೃತಿಕ ನಾಯಕ ಬಸವಣ್ಣನವರ ಮಹೋತ್ಸವ ಹಾಗೂ ಗಣ ಪದವಿ ಪ್ರಶಸ್ತಿ ಪ್ರದಾನದ ಹಿನ್ನೆಲೆಯಲ್ಲಿ ಶಿವಮೊಗ್ಗದ ಕಲ್ಯಾಣ ಮಂಟಪದಲ್ಲಿ ನಡೆದ ವೈಚಾರಿಕ ಕಾರ್ಯಕ್ರಮದಲ್ಲಿ ಗಣಪದವಿ ಪ್ರಶಸ್ತಿ ಸ್ವೀಕಾರ ಮಾಡಿ ಮಾತನಾಡಿದರು.

ಲಿಂಗಧಾರಿಗಳೆಂದು ಬೆಳಗ್ಗೆ, ಮಧ್ಯಾಹ್ನ, ಸಂಜೆ ಮೂರು ಹೊತ್ತು ತಪ್ಪದೇ ಲಿಂಗಪೂಜೆ ಮಾಡ್ತೀವಿ ಅಂತ ಹೇಳಿಕೊಂಡು ಬೇರೆಯವರಿಗೆ ಟೋಪಿ ಹಾಕುವಂಥ ಕೆಲಸ ಮಾಡಿದರೆ, ಬೇರೆಯವರಿಗೆ ಕಷ್ಟ ಕೊಟ್ಟರೆ ಮೂರು ಹೊತ್ತು ಪೂಜೆ ಮಾಡಿದರೂ ಅದರ ಫಲ ಸಿಗೋದಿಲ್ಲ.

ಇತ್ತೀಚಿನ ದಿನಗಳಲ್ಲಿ ಓದುವ ಪ್ರವೃತ್ತಿ ಕಡಿಮೆಯಾಗಿ ಮೊಬೈಲ್ ಬಳಕೆ ಹೆಚ್ಚಾಗಿದೆ. ಮೊಬೈಲ್ ಬಳಕೆ ಕಡಿಮೆ ಮಾಡಿ ಓದುವ ಪ್ರವೃತ್ತಿಯನ್ನು ಬೆಳೆಸಿಕೊಂಡಾಗ ಪುಸ್ತಕ ಸಂಸ್ಕೃತಿ ಉಳಿಸಿಕೊಳ್ಳಲಿಕ್ಕೆ ಸಾಧ್ಯ. ಇತ್ತೀಚಿನ ದಿನಗಳಲ್ಲಿ ಬೋಧನೆ ಮಾಡುವಂಥವರಿಗೇನೂ ಕೊರತೆಯಿಲ್ಲ. ಆದರೆ ಸಾಧನೆ ಮಾಡಿ ಬೋಧನೆ ಮಾಡಿದಂಥವರು ಬೆರಳೆಣಿಕೆಯಷ್ಟು ಮಾತ್ರ ಎಂದು ಹೇಳಿದರು.

ಈ ನಾಡಿನಲ್ಲಿ ಉಚಿತವಾಗಿ ಏನೇ ಕೊಟ್ಟರೂ ಅದಕ್ಕೆ ಗೌರವ ಇರೋದಿಲ್ಲ. ಅಲ್ಪ ಪ್ರಮಾಣದಲ್ಲಾದರೂ ಹಣ ಕೊಟ್ಟು ಕೊಂಡುಕೊಂಡರೆ ಅದಕ್ಕೆ ಬೆಲೆ ಇರುತ್ತದೆ. 12ನೇಯ ಶತಮಾನದಲ್ಲಿ 770 ಅಮರಗಣಂಗಳಿದ್ದರು. ಅವರೆಲ್ಲರೂ ಅರಿವು, ಆಚಾರ ಒಂದಾಗಿದ್ದವರು. ನಡೆ-ನುಡಿಗಳಲ್ಲಿ ಅಂತರ ಇಲ್ಲದೇ ಇರುವಂಥವರು. ಅಮರಗಣಂಗಳ ಸವಿನೆನಪಿಗಾಗಿ ಪ್ರತಿವರ್ಷ ಸಂತೇಕಡೂರಿನ ಪ್ರಭುದೇವ ಜ್ಞಾನ ಕೇಂದ್ರ ಸಂಗಮದಲ್ಲಿ ಅಮರಗಣ ಪ್ರಶಸ್ತಿಯನ್ನು ಕೊಡುತ್ತಿರುವುದು ತುಂಬಾ ಸಂತೋಷ. ಯಾವುದೇ ಪ್ರಶಸ್ತಿಯನ್ನು ಕೊಡುವ ಉದ್ದೇಶ ಬೇರೆಯವರಿಗೆ ಸ್ಫೂರ್ತಿಯನ್ನು ನೀಡುವಂಥದ್ದು. ನಮಗೆ ಪ್ರಶಸ್ತಿ ಕೊಟ್ಟು ನಮ್ಮನ್ನು ದೊಡ್ಡವರನ್ನಾಗಿ ಮಾಡೋದಲ್ಲ. ನಮ್ಮ ಮುಖಾಂತರ ಬೇರೆಯವರಿಗೆ ಸ್ಫೂರ್ತಿಯನ್ನು ನೀಡುತ್ತದೆ. ನಾವೆಲ್ಲರೂ ಅಮರಗಣಗಳಾಗಬೇಕು ಎನ್ನುವ ಭಾವನೆ ಸಾರ್ವಜನಿಕರಲ್ಲಿ ಮೂಡಬೇಕು. ನೂರಾರು ಜನ ಸ್ವಾಮಿಗಳಿದ್ದಾರೆ. ಎಲ್ಲರಿಗೂ ಆ ಪ್ರಶಸ್ತಿಯನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಎಲ್ಲರ ಪರವಾಗಿ ನಮಗೆ ಕೊಟ್ಟಿದ್ದಾರೆ ಎಂದು ಭಾವಿಸಿದ್ದೇವೆ.

ಮನುಷ್ಯ ಕಿರೀಟದಿಂದ ದೊಡ್ಡ ವ್ಯಕ್ತಿಯಾಗಲಾರ. ಯಾವುದೇ ವ್ಯಕ್ತಿ ದೊಡ್ಡವನಾಗುವುದು ಅರಿವು, ಆಚಾರದಿಂದ. ಬಸವಣ್ಣನವರು ಅರಿವು ಆಚಾರವನ್ನು ಒಂದಾಗಿಸಿಕೊಂಡಿದ್ದರಿಂದ ಇವತ್ತಿಗೂ ನಾವು ನೆನಪಿಸಿಕೊಳ್ಳುತ್ತೇವೆ. ಬಸವಣ್ಣನವರಷ್ಟು ವಿನಯವಂತಿಕೆ ಜಗತ್ತಿನಲ್ಲಿ ಬೇರೆ ಯಾವ ವ್ಯಕ್ತಿಯಲ್ಲೂ ಕಾಣಲಿಕ್ಕೆ ಸಾಧ್ಯ ಇಲ್ಲ. ಮುಗಿದ ಕೈ ಬಾಗಿದ ತಲೆ ಬಸವಣ್ಣನವರದಾಗಿತ್ತು. ಪ್ರತಿಯೊಬ್ಬರು ತತ್ವ, ಸಿದ್ಧಾಂತಗಳನ್ನು ಗಾಳಿಗೆ ತೂರಿ, ಸ್ವೇಚ್ಛಾಚಾರಿಗಳಂತೆ ನಡೆದುಕೊಳ್ಳುವಂಥವರು ಸಮಾಜದಲ್ಲಿ ಹೆಚ್ಚಿದ್ದಾರೆ. ಅದು ಖಾವಿಧಾರಿಗಳನ್ನೂ ಬಿಟ್ಟಿಲ್ಲ ಎಂದರು.

ಈ ಸಂದರ್ಭದಲ್ಲಿ ಬಾಲ್ಕಿಯ ಬಸವಲಿಂಗ ಪಟ್ಟದ್ದೇವರಿಗೆ ಹಾಗೂ ಇಳಕಲ್ಲಿನ ಗುರುಮಹಾಂತ ಮಹಾಸ್ವಾಮಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಶಿವಮೊಗ್ಗದ ಬೆಕ್ಕಿನಕಲ್ಮಠ ಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಪಾಂಡೋಮಟ್ಟಿಯ ಗುರುಬಸವ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.

## 41 ಆರೋಪಿಗಳನ್ನು ದಸ್ತಗಿರಿ ಮಾಡಿದ ಚನ್ನಗಿರಿ ಪೊಲೀಸ್

ಚನ್ನಗಿರಿ, ಜೂ. 3 - ನಗರದಲ್ಲಿ ಮಟ್ಕಾ ಆರೋಪಿಯಾದ ಆದೀಲ್ ಬಿನ್ ಕಲೀಂವುಲ್ಲಾ ಮೇ 24ರಂದು ಮೃತಪಟ್ಟ ಹಿನ್ನೆಲೆಯಲ್ಲಿ ಆತನ ಸಂಬಂಧಿಕರು, ಸಹಚರರು ಠಾಣೆಯ ಬಳಿ ಪ್ರತಿಭಟನೆ ಮಾಡಿ, ಪೀಠೋಪಕರಣ ಗಳನ್ನು ಒಡೆದು ಹಾಕಿ ಕರ್ತವ್ಯ ನಿರತ ಅಧಿ ಕಾರಿ, ಸಿಬ್ಬಂದಿಗಳಿಗೆ ಹಲ್ಲೆ ಮಾಡಿ, ಸರ್ಕಾರಿ ಆಸ್ತಿ ಪಾಸ್ತಿಗೆ ನಷ್ಟವುನ್ನುಂಟು ಮಾಡಿದ್ದರು.

ಪೊಲೀಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ ಚನ್ನಗಿರಿ ಪೊಲೀಸ್ ಸಿಬ್ಬಂದಿಗಳ ತಂಡ ಕಲ್ಲು ತೂರಿ ಪ್ರತಿಭಟನೆ ಮಾಡಿದ ಆರೋಪಿತರನ್ನು ಒಟ್ಟು 41 ಜನರನ್ನು ದಸ್ತಗಿರಿ ಮಾಡಿದ್ದಾರೆ. ಉಳಿದವರ ಪತ್ತೆಗಾಗಿ 2 ತಂಡಗಳನ್ನು ನಿಯೋಜಿಸಲಾಗಿದ್ದು, ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯಕ್ಷಮತೆಗೆ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

# ಪರಿಷತ್ 11 ಸ್ಥಾನಗಳಿಗೆ ಅವಿರೋಧ ಆಯ್ಕೆ

ಬೆಂಗಳೂರು, ಜೂ. 3 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ, ಸಚಿವ ಎನ್.ಎಸ್.ಬೋಸರಾಜ್, ಬಿಲ್ಕೀಶ್ ಬಾನು, ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಜೆಡಿಎಸ್‌ನ ಟಿ.ಎನ್.ಜವರಾಯೀ ಗೌಡ ಸೇರಿದಂತೆ 11 ಮಂದಿ ವಿಧಾನ ಪರಿಷತ್ತಿಗೆ ಅವಿರೋಧ ಆಯ್ಕೆಯಾಗುವುದು ಖಚಿತವಾಗಿದೆ.

ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಇಂದು ಮೂರು ರಾಜಕೀಯ ಪಕ್ಷಗಳು ತಮ್ಮ ಸಂಖ್ಯಾಬಲದ ಮೇಲೆ ಗೆಲುವು ಸಾಧ್ಯವಿರುವಷ್ಟು ಅಭ್ಯರ್ಥಿಗಳನ್ನಷ್ಟೇ ಕಣಕ್ಕಿಳಿಸಿರುವುದರಿಂದ ನಾಮಪತ್ರ ಸಲ್ಲಿಸಿರುವ ಅಷ್ಟೂ ಮಂದಿಯೂ ಅವಿರೋಧ ಆಯ್ಕೆ ಆಗಲಿದ್ದಾರೆ.

ಆಡಳಿತಾರೂಢ ಕಾಂಗ್ರೆಸ್‌ಗೆ ಸಂಖ್ಯಾಬಲದ ಮೇಲೆ ಏಳು ಸ್ಥಾನಗಳು ದಕ್ಕಲಿದ್ದು, ಈ ಸ್ಥಾನಗಳಿಗೆ ಬೋಸರಾಜು, ಯತೀಂದ್ರ ಸಿದ್ದರಾಮಯ್ಯ, ಕೆ. ಗೋವಿಂದರಾಜು, ಐವಾನ್ ಡಿಸೋಜ, ಬಿಲ್ಕೀಶ್ ಬಾನು, ಜಗದೇವ್ ಗುತ್ತೇದಾರ್ ಹಾಗೂ ವಸಂತಕುಮಾರ್ ಪಕ್ಷದ ಅಭ್ಯರ್ಥಿಗಳಾಗಿ ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಪ್ರತಿಪಕ್ಷ ಬಿಜೆಪಿಗೆ ಮೂರು ಸ್ಥಾನ ದಕ್ಕಲಿದ್ದು, ಆ ಸ್ಥಾನಗಳಿಗೆ ಸಿ.ಟಿ.ರವಿ, ಎನ್. ರವಿಕುಮಾರ್, ಎಂ.ಜಿ. ಮುಳೆ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದರು. ಇನ್ನೊಂದು ಸ್ಥಾನ ಜೆಡಿಎಸ್‌ಗೆ ದಕ್ಕುತ್ತಿದ್ದು ಆ ಪಕ್ಷದ ಹಿರಿಯ ಮುಖಂಡ ಟಿ.ಎನ್. ಜವರಾಯೀ ಗೌಡ ನಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಪರಿಶೀಲನೆ ಜೂನ್ 4ರಂದು ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಜೂನ್ 6 ಕಡೆಯ ದಿನ, ಅಂದೇ ಚುನಾವಣಾಧಿಕಾರಿ ಅಧಿಕೃತವಾಗಿ ಜಯ ಗಳಿಸಿದವರ ಹೆಸರು ಘೋಷಿಸಲಿದ್ದಾರೆ.

ಯಾವುದೇ ರಾಜಕೀಯ ಪಕ್ಷಗಳು ತಮಗಿಲ್ಲದ ಮತ ಕಸಿಯಲು ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿರುವುದರಿಂದ ಅವಿರೋಧ ಆಯ್ಕೆಗೆ ರಹದಾರಿ ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಸಚಿವರುಗಳು ತಮ್ಮ ಪಕ್ಷದ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಖುದ್ದು ಹಾಜರಿದ್ದರು.

ಜವರಾಯೀ ಗೌಡ ನಾಮಪತ್ರ ಸಲ್ಲಿಸುವಾಗ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಸೇರಿದಂತೆ ಮುಖಂಡರುಗಳು ಉಪಸ್ಥಿತರಿದ್ದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ್, ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ತಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಹಾಜರಿದ್ದರು.

## ಸಲ್ಮಾನ್ ಹತ್ಯೆಗೆ ಅಪ್ರಾಪ್ತರ ಬಳಸಲು ಸಂಚು



ಮುಂಬೈ, ಜೂ. 3 – ಲಾರೆನ್ಸ್ ಬಿಷ್ಣೋಯಿ ಹಾಗೂ ಗೋಲ್ಡಿ ಬ್ರಾರ್ ಗ್ಯಾಂಗ್‌ಗಳು ಅಪ್ರಾಪ್ತರನ್ನು ಬಳಸಿಕೊಂಡು ಬಾಲಿವುಡ್ ನಟ ಸಲ್ಮಾನ್ ಖಾನ್ ಹತ್ಯೆಗೆ ಸಂಚು ನಡೆಸಿದ್ದವು ಎಂದು ಪೊಲೀಸರು ಹೇಳಿದ್ದಾರೆ.

ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಸದಸ್ಯ ಅಜಯ್ ಕಶ್ಯಪ್ ಹಾಗೂ ಇನ್ನೋರ್ವ ಆರೋಪಿ ನಡುವಿನ ವಿಡಿಯೋ ಸಂಭಾಷಣೆಯಲ್ಲಿ ಈ ವಿಷಯ ಬೆಳಕಿಗೆ ಬಂದಿದೆ ಎಂದು ನವಿ ಮುಂಬೈ ಪೊಲೀಸರು ಹೇಳಿದ್ದಾರೆ.

ಮುಂಬೈ, ಥಾಣೆ, ನವಿ ಮುಂಬೈ, ಪುಣೆ, ರಾಯಗಡ್ ಹಾಗೂ ಗುಜರಾತ್‌ಗಳಲ್ಲಿ ಶಾರ್ಪ್ ಶೂಟರ್‌ಗಳನ್ನು ಸಜ್ಜುಗೊಳಿಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಕೆನಡಾದಲ್ಲಿರುವ ಭೂಗತ ಗೋಲ್ಡಿ ಬ್ರಾರ್ ಹತ್ಯೆಗೆ ತಿಳಿಸಿದ್ದ ಎಂಬುದು ತನಿಖೆಯಿಂದ ತಿಳಿದು ಬಂದಿದೆ. ಈ ಹತ್ಯೆಗಾಗಿ ಅಪ್ರಾಪ್ತರನ್ನು ಬಳಸಲು ಸಂಚು ನಡೆಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.






## ನಗರದಲ್ಲಿ ಇಂದು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆ



ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 140ನೇ ಜನ್ಮ ದಿನಾಚರಣೆಯನ್ನು ಇಂದು ಬೆಳಿಗ್ಗೆ 9ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ. ವಾಮದೇವಪ್ಪ ವಹಿಸುವರು. ಬಿ.ದಿಳ್ಳೆಪ್ಪ, ರೇವಣಸಿದ್ದಪ್ಪ ಅಂಗಡಿ, ಸಿ.ಜಿ. ಜಗದೀಶ್, ಪ್ರಕಾಶ್ ಜಿಗಳಿ, ಇ.ಎಂ. ಮಂಜುನಾಥ, ಕೆ.ಎಸ್. ವೀರೇಶ್ ಪ್ರಸಾದ್ ಭಾಗವಹಿಸುವರು.

## ಶೇ.100ರಷ್ಟು ಹಣ್ಣಿನ ರಸ ಎಂಬ ಹೇಳಿಕೆ ತೆಗೆಯಲು ಆದೇಶ : ಎಫ್.ಎಸ್.ಎಸ್.ಎ.ಐ.

ನವದೆಹಲಿ, ಜೂ. 3 – 'ಶೇ.100ರಷ್ಟು' ಹಣ್ಣಿನ ರಸ ಎಂಬ ಹೇಳಿಕೆಗಳನ್ನು ಹಾನೀಯಗಳ ಪೊಟ್ಟಣಗಳ ಮೇಲಿಂದ ತೆಗೆದು ಹಾಕುವಂತೆ ಆಹಾರ ನಿಯಂತ್ರಕ ಎಫ್.ಎಸ್.ಎಸ್.ಎ.ಐ. ಆದೇಶ ಹೊರಡಿಸಿದೆ.

ಆಹಾರ ವಲಯದಲ್ಲಿರುವ ಎಲ್ಲಾ ಉದ್ಯಮಗಳು ಶೇ.100ರಷ್ಟು ಹಣ್ಣಿನ ರಸ ಎಂಬ ಹೇಳಿಕೆಗಳನ್ನು ತೆಗೆದು ಹಾಕಬೇಕು ಎಂದು ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ. ಆಹಾರ ಸುರಕ್ಷತೆ ಹಾಗೂ ನಿಯಂತ್ರಣ ನಿಯಮಗಳ ಪ್ರಕಾರ, ಶೇ.100ರಷ್ಟು ಎಂಬ ಹೇಳಿಕೆ ನೀಡಲು ಅವಕಾಶವಿಲ್ಲ ಎಂದು ಆದೇಶದಲ್ಲಿ ಹೇಳಲಾಗಿದೆ.

ಹಣ್ಣಿನ ರಸದಲ್ಲಿರುವ ಬಹುತೇಕ ಭಾಗ ನೀರಾಗಿದೆ. ಹಣ್ಣಿನ ತಿರುಳಿನ ಪ್ರಮಾಣ ಸೀಮಿತವಾಗಿರುತ್ತದೆ. ಹೀಗಾಗಿ ಶೇ.100ರಷ್ಟು ಹಣ್ಣಿನ ರಸ ಎಂಬ ಹೇಳಿಕೆ ಬಳಸಲಾಗದು ಎಂದು ತಿಳಿಸಲಾಗಿದೆ.









KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas